ಜನಮನದ ದನಿ
# ಪ್ರಜೋದಯ
ಸಂಪಾದಕ : ಜೆ.ಆರ್. ಕೆಂಚೇಗೌಡ



ಮುಂಬೈನ ವಾಂಖೆಡೆ ಕ್ರೀಡಾಂಗಣದಲ್ಲಿ ಬುಧವಾರ ಇಂಗ್ಲೆಂಡ್ ವಿರುದ್ಧ ನಡೆದ ಟಿ-20 ವಿಶ್ವಕಪ್‌ನಲ್ಲಿ ವೆಸ್ಟ್ ಇಂಡೀಸ್ ತಂಡದ ಶೆರ್ಫನ್ ರುದರ್ಫೋರ್ಡ್ ಅಜೇಯ ಅರ್ಧ ಶತಕ (76 ರನ್) ಗಳಿಸುವ ಮೂಲಕ 196 ರನ್ ಕಲೆಹಾಕಿತು.

12 ಫೆಬ್ರವರಿ 2026 ಗುರುವಾರ ಬೆಲೆ ₹ 2.00 ಸಂಪುಟ : 19 ಸಂಚಿಕೆ : 328 | ಪುಟ-4 | ಹಾಸನ | E-mail : prajodayahsn@gmail.com | RNI NO: KARKAN/2007/22629



ನಿಯಮಗಳ ಅಡಿಯಲ್ಲಿ ಮರೆ ಮಾಚಲಾಗುವ ಪಾಶವೀಯತೆ » 2



ಸಕಲೇಶಪುರ : ರಸ್ತೆ ಅಗಲೀಕರಣ ಪ್ರಕ್ರಿಯೆಗೆ ಮತ್ತೆ ಚಾಲನೆ » 3



ಅಪ್ರಕಟಿತ ಆತ್ಮಚರಿತ್ರೆ ವಿವಾದ : ಪ್ರಕಾಶನ ಸಂಸ್ಥೆಗೆ ನೋಟೀಸ್ » 4

# ಕೇಂದ್ರ ಸರ್ಕಾರದಿಂದ ಭಾರತ ಮಾರಾಟ

## ಲೋಕಸಭೆಯಲ್ಲಿ ರಾಹುಲ್ ಗಾಂಧಿ ವಾಗ್ದಾಳಿ | ಅಮೇರಿಕಾದೊಂದಿಗಿನ ವ್ಯಾಪಾರ ಒಪ್ಪಂದಕ್ಕೆ ಕಿಡಿ

• ಪ್ರಜೋದಯ ವರದಿ

**ನವದೆಹಲಿ:** ಭಾರತ ಮತ್ತು ಅಮೇರಿಕಾ ನಡುವಿನ ವ್ಯಾಪಾರ ಒಪ್ಪಂದದ ಕುರಿತು ಟೀಕೆ ಮುಂದುವರಿಸಿರುವ ಲೋಕಸಭೆ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಅವರು ಕೇಂದ್ರ ಸರ್ಕಾರವು ಟ್ರಂಪ್ ಜೊತೆ ಒಪ್ಪಂದ ಮಾಡಿಕೊಳ್ಳುವ ಮೂಲಕ ಅವರಿಗೆ ಶರಣಾಗಿದೆ. ರೈತರ ಹಿತಾಸಕ್ತಿಯನ್ನು ಕೂಡ ಬಲಿ ಕೊಟ್ಟಿದೆ. ಈ ಒಪ್ಪಂದವು ಭಾರತ ಮಾತೆಯನ್ನು ಮಾರಾಟ ಮಾಡಿದಂತೆ ಎಂದು ಕಿಡಿಕಾರಿದರು.

ಕೇಂದ್ರ ಸರ್ಕಾರದ ಬಜೆಟ್ ಕುರಿತ ಚರ್ಚೆಯಲ್ಲಿ ರಾಹುಲ್ ಗಾಂಧಿ ಮಾತನಾಡುತ್ತಾ, ಕೇಂದ್ರ ಸರ್ಕಾರ ಭಾರತವನ್ನು, ಭಾರತ ಮಾತೆಯನ್ನು ಮಾರುತ್ತೀದ್ದಿರಾ.. ಇದನ್ನು ಮಾರಲು ನಿಮಗೆ ನಾಚಿಕೆಯಾಗುವುದಿಲ್ಲವೇ, ಭಾರತಕ್ಕೆ ಹಾನಿ ಉಂಟು ಮಾಡುವ ಈ ಒಪ್ಪಂದವನ್ನು ಮೋದಿ ಸೇರಿ ಯಾರೇ ಪ್ರಧಾನಿಯಾಗಿದ್ದರೂ ಕೂಡ ಒಪ್ಪಿಕೊಳ್ಳಲು ಸಾಧ್ಯವಿಲ್ಲ. ಯಾವುದೋ ಬಾಹ್ಯ ಒತ್ತಡದಿಂದ ಅಮೇರಿಕಾ ಜೊತೆ ಮೋದಿ ಸರ್ಕಾರ ಒಪ್ಪಂದ ಮಾಡಿಕೊಂಡಿದೆ ಎಂದು ಆರೋಪಿಸಿದರು.



ಒಂದು ವೇಳೆ ಇಂಡಿಯಾ ಒಕ್ಕೂಟವು ಅಧಿಕಾರದಲ್ಲಿದ್ದು, ಅಮೇರಿಕಾದೊಂದಿಗೆ ವ್ಯಾಪಾರ ಒಪ್ಪಂದಕ್ಕೆ ಮುಂದಾಗಿದ್ದರೆ, ಟ್ರಂಪ್ ಅವರಿಗೆ ಭಾರತವನ್ನು ಅಮೇರಿಕಾದಷ್ಟೇ ಸಮಾನವಾಗಿ ಕಾಣುವಂತೆ ಹೇಳುತ್ತಿದ್ದೆವು. ಭಾರತವು ಯಾರಿಂದ ತೈಲ ಖರೀದಿಸಬೇಕೆನ್ನುವುದನ್ನು ಕೂಡ ಅಮೇರಿಕ ನಿರ್ಧರಿಸುತ್ತಿದೆ. ಒಂದು ವೇಳೆ ನಾವು ಅವರು ಹೇಳಿದಂತೆ ನಡೆದುಕೊಳ್ಳದಿದ್ದರೆ ನಮ್ಮ ಮೇಲೆ ಬೆದರಿಕೆಯ ರೀತಿಯಲ್ಲಿ ಹೆಚ್ಚುವರಿ ಸುಂಕ ವಿಧಿಸುತ್ತಾರೆಂದು ಹೇಳಿದರು.

ಮೋದಿ ಅವರು ಇತ್ತೀಚೆಗೆ ಮಾತನಾಡುವಾಗ, ಯುದ್ಧಗಳ ಕಾಲ ಮುಗಿಯಿತು ಎಂದಿದ್ದರು. ಆದರೆ, ಇಂದಿಗೂ ಜಗತ್ತಿನಾದ್ಯಂತ ಹಲವು ಭಾಗಗಳಲ್ಲಿ ಸಂಘರ್ಷಗಳಾಗುತ್ತಿವೆ. ಭಾರತದ ಮೇಲೂ ಯುದ್ಧದ ನೆರಳಿದೆ. ಇಂತಹ ಸಂದರ್ಭದಲ್ಲಿ ನಾವು ನಮ್ಮ ಶಕ್ತಿಯನ್ನು ಅರಿತುಕೊಳ್ಳಬೇಕು. ನಮ್ಮ ಪ್ರಮುಖ ಶಕ್ತಿ, ಈ ದೇಶದ ಜನರಾಗಿದ್ದಾರೆ. ದೇಶದ ನಾಗರಿಕರ ಮಾಹಿತಿ, ಆಹಾರ ಸರಪಳಿ ಹಾಗು ಇಂಧನ ಸುರಕ್ಷತೆಯನ್ನು ಕಾಪಾಡಿ ಕೊಳ್ಳಬೇಕಾಗಿದೆ ಎಂದರು.

### ರಾಹುಲ್ ಗಾಂಧಿ ವಿರುದ್ಧ ಹಕ್ಕುಚ್ಯುತಿ ನೋಟೀಸ್

ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಮತ್ತು ಸಂಸದೀಯ ವ್ಯವಹಾರಗಳ ಸಚಿವ ಕಿರಣ್ ರಿಜಿಜು ನಡುವೆ ಮಾತಿನ ಚಕಮಕಿ ನಡೆಯಿತು. ಸದನದ ನಿಯಮಗಳನ್ನು ಉಲ್ಲಂಘಿಸಿದ್ದಕ್ಕೆ ಗದ್ದಲ ಭುಗಿಲೆದ್ದಿತು.

ಈ ವೇಳೆ ರಾಹುಲ್ ಗಾಂಧಿ ವಿರುದ್ಧ ವಾಗ್ದಾಳಿ ನಡೆಸಿದ ಕೇಂದ್ರ ಸಚಿವ ಕಿರಣ್ ರಿಜಿಜು, ನೀವು ಯಾವುದೇ ಪುರಾವೆಗಳಿಲ್ಲದೆ ಆರೋಪಗಳನ್ನು ಹೊರಿಸುತ್ತಿದ್ದೀರಿ. ಅದು ಸ್ವೀಕಾರಾರ್ಹವಲ್ಲ, ನಿಮ್ಮ ಆರೋಪಗಳಿಗೆ ಸಾಕ್ಷಿ ನೀಡಿ. ಭಾರತ ಮಾರಾಟಕ್ಕಿಲ್ಲ, ಕಾಂಗ್ರೆಸ್ ಪಕ್ಷವು ದೇಶವನ್ನು ದುರ್ಬಲಗೊಳಿಸುತ್ತಿದೆ ಎಂದು ಹೇಳಿದರು.

ಅಧಿವೇಶನದ ಬಳಿಕ ಮಾತನಾಡಿದ ಸಚಿವ ಕಿರಣ್ ರಿಜಿಜು, ರಾಹುಲ್ ಗಾಂಧಿ ವಿರುದ್ಧ ಸರ್ಕಾರ ಹಕ್ಕುಚ್ಯುತಿ ನೋಟೀಸ್ ಸಲ್ಲಿಸಲಿದೆ. ಅವರು ಸದನವನ್ನು ದಾರಿ ತಪ್ಪಿಸಿದ್ದಾರೆ ಮತ್ತು ಆಧಾರರಹಿತ ಆರೋಪಗಳನ್ನು ಮಾಡಿದ್ದಾರೆಂದು ಆರೋಪಿಸಿದರು.

# ಕೈಗಾರಿಕಾ ಕಾರಿಡಾರ್ ವಿಸ್ತರಿಸಿ: ಹೆಚ್.ಡಿ.ದೇವೇಗೌಡ

## ರಾಜ್ಯಸಭೆಯಲ್ಲಿ ಹಲಸು, ಹುಣಸೆ, ನೇರಳೆ ಮಂಡಳಿ ರಚನೆಗೆ ಕೋರಿಕೆ

• ಪ್ರಜೋದಯ ವರದಿ

**ನವದೆಹಲಿ:** ರಾಷ್ಟ್ರದ ಮೂರು ಪ್ರಮುಖ ಬಂದರುಗಳನ್ನು ಜೋಡಿಸುವ ಬೆಂಗಳೂರಿನಿಂದ ಮಂಗಳೂರಿನವರೆಗೆ ಕೈಗಾರಿಕಾ ಕಾರಿಡಾರ್ ವಿಸ್ತರಣೆ ಜೊತೆಗೆ ಹಲಸು, ಹುಣಸೆ, ನೇರಳೆ ಮಂಡಳಿ ರಚನೆ ಮಾಡಬೇಕೆಂದು ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡ ಅವರು ಕೋರಿದರು.

ರಾಜ್ಯಸಭೆಯಲ್ಲಿ ಬುಧವಾರ ಬಜೆಟ್ ಮೇಲಿನ ಚರ್ಚೆಯಲ್ಲಿ ಮಾತನಾಡಿದ ಅವರು, ಈಗಾಗಲೇ ಚೆನ್ನೈನಿಂದ ಬೆಂಗಳೂರು ಮತ್ತು ಹೈದರಾಬಾದ್‌ನಿಂದ ಬೆಂಗಳೂರು ನಡುವಿನ ಪ್ರಮುಖ ಬಂದರುಗಳನ್ನು ಹೊಂದಿರುವ ಕೈಗಾರಿಕಾ ಕಾರಿಡಾರ್ ಯೋಜನೆಗಳಿಗೆ ಅನುಮೋದನೆ ನೀಡುವ ಸರ್ಕಾರದ ನಿರ್ಧಾರವನ್ನು ಸ್ವಾಗತಿಸುತ್ತೇನೆ. ಅದೇ ರೀತಿ, ಬೆಂಗಳೂರಿನಿಂದ ಮಂಗಳೂರಿನವರೆಗೆ ಈ ಕೈಗಾರಿಕಾ ಕಾರಿಡಾರ್ ವಿಸ್ತರಿಸಿದರೆ ಕೈಗಾರಿಕಾ ಅಭಿವೃದ್ಧಿಗೆ ಬಹಳಷ್ಟು ಅನುಕೂಲ ಆಗುತ್ತದೆ. ಮಂಗಳೂರು ಕೂಡ ಪ್ರಮುಖ ಬಂದರು ಆಗಿದ್ದು,



ವಿಶಾಖಪಟ್ಟಣ, ಚೆನ್ನೈ ಹಾಗು ಮಂಗಳೂರು ಬಂದರುಗಳನ್ನು ಜೋಡಿಸಿದರೆ ರಾಷ್ಟ್ರದ ಕೈಗಾರಿಕಾಭಿವೃದಿಗೆ ಪರಿವರ್ತನಾತ್ಮಕ ವೇಗ ಬರುತ್ತದೆ ಎಂದು ಪ್ರತಿಪಾದಿಸಿದರು.

ಕರ್ನಾಟಕ ಸೇರಿ ತಮಿಳುನಾಡು, ಕೇರಳ ಮುಂತಾದ ರಾಜ್ಯಗಳಲ್ಲಿ ಬೆಳೆಯಲಾಗುವ ಹಲಸು, ಹುಣಸೆ, ನೇರಳೆಗೆ ಉತ್ತೇಜನ ನೀಡಲು ಮಕಾನ ಮಂಡಳಿಯಂತೆ ಪ್ರತ್ಯೇಕ ಮಂಡಳಿಯನ್ನು ರಚನೆ ಮಾಡಬೇಕು. ಈ ಮೂರು ಬೆಳೆಗಳು ಔಷಧೀಯ ಗುಣಗಳನ್ನು ಹೊಂದಿದ್ದು, ದಕ್ಷಿಣದ ಭಾಗದಲ್ಲಿ ವ್ಯಾಪಕವಾಗಿ ಬೆಳೆಯಲಾಗುತ್ತಿದೆ. ಕಡಿಮೆ ಮಳೆ ಅಗತ್ಯವಿರುವ ಬೆಳೆಗಳು. ಈ ಬಗ್ಗೆ ಪ್ರಧಾನಿ

> ಕೇಂದ್ರ ಸರ್ಕಾರವು ಕರ್ನಾಟಕದ ಕರಾವಳಿ ಸೇರಿ ಇತರ ಪ್ರದೇಶಗಳಲ್ಲಿ ಯಥೇಚ್ಛವಾಗಿ ಬೆಳೆಯಲಾಗುವ ತೆಂಗಿನಕಾಯಿ, ಶ್ರೀಗಂಧ, ಕೋಕೋ ಮತ್ತು ಗೋಡಂಬಿಯಂತಹ ವಾಣಿಜ್ಯ ಬೆಳೆಗಳಿಗೆ ದೊಡ್ಡ ಪ್ರಮಾಣದಲ್ಲಿ ಉತ್ತೇಜನ ನೀಡಿರುವುದು ಉತ್ತಮವಾದ ಹೆಜ್ಜೆ.
> -ಹೆಚ್.ಡಿ.ದೇವೇಗೌಡ, ಮಾಜಿ ಪ್ರಧಾನಿ

ನರೇಂದ್ರ ಮೋದಿ ಹಾಗು ಕೃಷಿ ಸಚಿವ ಶಿವರಾಜ್ ಸಿಂಗ್ ಚೌಹಾಣ್ ಅವರು ಮಂಡಳಿ ರಚನೆ ಬಗ್ಗೆ ಕ್ರಮ ವಹಿಸುತ್ತಾರೆಂಬ ನಂಬಿಕೆ ಹೊಂದಿದ್ದೇನೆಂದು ವಿಶ್ವಾಸ ವ್ಯಕ್ತಪಡಿಸಿದರು.

ವಿತ್ತ ಸಚಿವೆ ನಿರ್ಮಲಾ ಸೀತಾರಾಮನ್ ಅವರು ಮಂಡಿಸಿರುವ 2026-2027ನೇ ಸಾಲಿನ ಕೇಂದ್ರದ ಆಯ-ವ್ಯಯವು ರಾಷ್ಟ್ರದ ಸರ್ವತೋಮುಖ ಅಭಿವೃದ್ಧಿಗೆ ಪೂರಕವಾಗಿದೆ. ಈ ಬಜೆಟ್‌ನ್ನು ಎನ್‌ಡಿಎ

» ನಾಲ್ಕನೇ ಪುಟದಲ್ಲಿ

# ಇಂದು ಎಂಸಿಇ ಆಡಳಿತ ಮಂಡಳಿ ಅವಿಶ್ವಾಸ ಸಭೆ

## ಒಂದು ತಂಡ ಪ್ರವಾಸ, ಮತ್ತೊಂದು ತಂಡ ಹೋಟೆಲ್‌ನಲ್ಲಿ ಕಾರ್ಯತಂತ್ರ

• ಪ್ರಜೋದಯ ವರದಿ

**ಹಾಸನ:** ನಗರದ ಮಲೆನಾಡು ತಾಂತ್ರಿಕ ಶಿಕ್ಷಣ ಸಂಸ್ಥೆ ಆಡಳಿತ ಮಂಡಳಿಯ ಅಧಿಕಾರಕ್ಕಾಗಿ ಎರಡು ತಂಡಗಳ ನಡುವೆ ಬಹುದಿನಗಳಿಂದ ನಡೆಯುತ್ತಿರುವ ಗೊಂದಲಕ್ಕೆ ಸುಖಾಂತ್ಯ ಕಾಣಿಸಲು ಹೈಕೋರ್ಟ್ ನಿರ್ದೇಶನದಂತೆ ಗುರುವಾರ ಅವಿಶ್ವಾಸ ಮಂಡನ ಸಭೆ ನಡೆಯಲಿದೆ.

ಅಧಿಕಾರ ಪಡೆದುಕೊಳ್ಳಲು ಎರಡು ತಂಡಗಳು ತಮ್ಮದೇಯಾದ ಕಾರ್ಯತಂತ್ರ ಹೆಣೆಯುವುದರಲ್ಲಿ ನಿರತವಾಗಿವೆ. 10 ಜನರ ಸದಸ್ಯರ ತಂಡವೊಂದು ಧರ್ಮಸ್ಥಳ ಪ್ರವಾಸಕ್ಕೆ ತೆರಳಿ ಕಾರ್ಯತಂತ್ರ ರೂಪಿಸುತ್ತಿದೆ. ಅಶೋಕ್ ಹಾರನಹಳ್ಳಿ ಅವರ ನೇತೃತ್ವದ ತಂಡದ 14 ಸದಸ್ಯರು ಬುಧವಾರ ನಗರದ ಖಾಸಗಿ ಹೋಟೆಲ್‌ನಲ್ಲಿ ಸಭೆ ನಡೆಸಿ ಅವಿಶ್ವಾಸ ನಿರ್ಣಯ ಮಂಡನೆಗೆ ತಯಾರಿ ನಡೆಸಿದರು.

ಫೆ.12ರಂದು ಮಧ್ಯಾಹ್ನ 12





ಗಂಟೆಗೆ ಸಭೆ ನಡೆಸಿ ಅವಿಶ್ವಾಸ ನಿರ್ಣಯವನ್ನು ಕಾನೂನು ಬದ್ಧವಾಗಿ ನಡೆಸಿ ವರದಿ ಸಲ್ಲಿಸುವಂತೆ ಹೈಕೋರ್ಟ್ ಸ್ಪಷ್ಟ ನಿರ್ದೇಶನ ನೀಡಿದೆ. ಹಿರಿಯ ವಕೀಲರನ್ನು ವೀಕ್ಷಕರಾಗಿ ನೇಮಕ ಮಾಡಿದ್ದು, ಅವರ ಸಮ್ಮುಖದಲ್ಲಿ ಎಲ್ಲಾ ಪ್ರಕ್ರಿಯೆಗಳನ್ನು ಪೂರ್ಣಗೊಳಿಸಬೇಕು. ಸಭೆಯ ಸಂಪೂರ್ಣ ವಿವರಗಳೊಂದಿಗೆ ಸಹಿ ಸಂಗ್ರಹ, ವೀಡಿಯೋ ಚಿತ್ರೀಕರಣ ಸೇರಿ ಎಲ್ಲಾ ದಾಖಲಾತಿಗಳನ್ನು ಸಂಗ್ರಹಿಸಿ ಫೆ.16 ರಂದು ವರದಿ ಸಲ್ಲಿಸುವಂತೆ ನಿರ್ದೇಶನ ನೀಡಿದೆ. ಗುರುವಾರ ನಡೆಯುವ ಅವಿಶ್ವಾಸ ನಿರ್ಣಯ ಸಭೆ ಸಹಜವಾಗಿ ಕುತೂಹಲ ಮೂಡಿಸಿದೆ.

ಒಟ್ಟು 24 ಸದಸ್ಯರ ಸಂಖ್ಯಾ ಬಲ ಹೊಂದಿರುವ ಮಲೆನಾಡು ತಾಂತ್ರಿಕ ಶಿಕ್ಷಣ ಸಂಸ್ಥೆ ಆಡಳಿತ ಮಂಡಳಿಯ ಅಧಿಕಾರ ಹಿಡಿಯಲು 13 ಸದಸ್ಯರ ಬೆಂಬಲ ಅಗತ್ಯವಾಗಿದೆ. ಸಂಸ್ಥೆಯ ಮಾಜಿ ಅಧ್ಯಕ್ಷ ಅಶೋಕ್ ಹಾರನಹಳ್ಳಿ ಹಾಗು ಬಿ.ಆರ್.ಗುರುದೇವ್ ಅವರ ತಂಡ 14 ಸದಸ್ಯರ ಬೆಂಬಲ ಹೊಂದಿದೆ. ಆರ್.ಟಿ.ದ್ಯಾವೇಗೌಡ, ಚೌಡುವಳ್ಳಿ ಜಗದೀಶ್ ಅವರ ತಂಡ 10 ಸದಸ್ಯರ ಬಲ ಹೊಂದಿದೆ ಎಂದು ಹೇಳಲಾಗುತ್ತಿದೆ. ಅಂತಿಮವಾಗಿ ಯಾವ ತಂಡ ಅವಿಶ್ವಾಸ ಮಂಡನೆಯಲ್ಲಿ ಯಶಸ್ಸು ಕಾಣುವುದು ಆ ವರದಿಯನ್ನು ವೀಕ್ಷಕರು ಹೈಕೋರ್ಟ್‌ಗೆ ಫೆ.16 ರಂದು ಸಲ್ಲಿಸಲಿದ್ದಾರೆ. ಆ ವರದಿಯನ್ನು ಕೋರ್ಟ್ ಪರಿಶೀಲನೆ ನಡೆಸಿ, ಫೆ.16 ಅಥವಾ ಶೀಘ್ರವಾಗಿ ಆಡಳಿತ ಮಂಡಳಿ ಅಧಿಕಾರಕ್ಕಾಗಿ ನಡೆಯುತ್ತಿರುವ ಗೊಂದಲವನ್ನು ಸುಖಾಂತ್ಯಗೊಳಿಸಲಿದೆ.

# ಪ್ರೀತಮ್ ಗೌಡಗೆ ಟಿಕೆಟ್ ಸಿಗದಿದ್ದರೆ ಬಿಜೆಪಿಯಲ್ಲಿ ಇರಲ್ಲ

## ಕಾಂಗ್ರೆಸ್ ಸೇರಲು ಟವಲ್: ಜೆಡಿಎಸ್ ಜಿಲ್ಲಾಧ್ಯಕ್ಷ ಕೆ.ಎಸ್.ಲಿಂಗೇಶ್ ಆರೋಪ

• ಪ್ರಜೋದಯ ವರದಿ

**ಹಾಸನ:** ಮುಂಬರುವ ವಿಧಾನಸಭಾ ಚುನಾವಣೆಯಲ್ಲಿ ಪ್ರೀತಮ್ ಜೆ.ಗೌಡ ಅವರಿಗೆ ಹಾಸನ ಕ್ಷೇತ್ರದಿಂದ ಟಿಕೆಟ್ ಸಿಗದಿದ್ದರೆ ಬಿಜೆಪಿಯಲ್ಲಿ ಇರುವುದಿಲ್ಲ. ಕಾಂಗ್ರೆಸ್ ಸೇರಲು ಟವಲ್ ಹಾಕಿಕೊಂಡಿದ್ದಾರೆಂದು ಜೆಡಿಎಸ್ ಜಿಲ್ಲಾಧ್ಯಕ್ಷ ಕೆ.ಎಸ್.ಲಿಂಗೇಶ್ ಅವರು ಹೇಳಿದರು.

ಬುಧವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಪ್ರೀತಮ್ ಗೌಡ ಅವರು ತಮ್ಮ ಸ್ನೇಹಿತ ಶರತ್ ಅವರನ್ನು ಕಾಂಗ್ರೆಸ್‌ಗೆ ಕಳುಹಿಸಿ, ವೇದಿಕೆ ಸಿದ್ಧಪಡಿಸಿಕೊಂಡು ಆ ಮೂಲಕ ಏನೇನು ಮಾಡಬೇಕೆಂದು ಕೊಂಡಿದ್ದಾರೆಂಬುದು ನಮಗೆ ಗೊತ್ತಿದೆ. ನಮ್ಮ ಶಕ್ತಿ ಏನಿದೆ ಎಂಬುದನ್ನು ಇತ್ತೀಚೆಗೆ ನಡೆದ ಸಮಾವೇಶದಲ್ಲಿ ತೋರಿಸಿದ್ದೇವೆ. ನಾವು ನಿಮ್ಮನ್ನು ಬೇಡಿ ಕೊಳ್ಳುವುದಿಲ್ಲ. ರಾಜಕೀಯ ಧೃವೀಕರಣದಲ್ಲಿ ಜೆಡಿಎಸ್-ಬಿಜೆಪಿ ಮೈತ್ರಿ ನೂರಕ್ಕೆ ನೂರರಷ್ಟು ಮುಂದುವರೆಯಲಿದೆ ಎಂದು ಸ್ಪಷ್ಟಪಡಿಸಿದರು.





ಜೆಡಿಎಸ್‌ಗೆ ಹೆಚ್.ಡಿ.ದೇವೇಗೌಡರು, ಹೆಚ್.ಡಿ.ಕುಮಾರಸ್ವಾಮಿ ಅವರೇ ಹೈಕಮಾಂಡ್. ಅವರು ಹೇಳಿದಂತೆ ನಾವೆಲ್ಲಾ ನಡೆದುಕೊಳ್ಳುತ್ತೇವೆ. ಮೈತ್ರಿ ವಿರುದ್ಧ ಹೇಳಿಕೆ ನೀಡುತ್ತಿರುವ ಬಿಜೆಪಿ ರಾಜ್ಯ ಪ್ರಧಾನ ಕಾರ್ಯದರ್ಶಿ ಪ್ರೀತಮ್ ಜೆ. ಗೌಡ ಅವರಿಗೆ ಯಾರು ಹೈಕಮಾಂಡ್ ಎಂಬುದು ನಮಗೆ ಗೊತ್ತಿಲ್ಲ. ಹಾಸನ ಜಿಲ್ಲೆಗೆ ಅವರೇ ಹೈಕಮಾಂಡ್ ಎಂದು ಭಾವಿಸಿ ಈ ರೀತಿ ಹೇಳಿಕೆಗಳನ್ನು ನೀಡುತ್ತಿದ್ದಾರೆ. ಕಳೆದ ಲೋಕಸಭೆ ಚುನಾವಣೆ ವೇಳೆ ಕಾಂಗ್ರೆಸ್ ಪರವಾಗಿ ಕೆಲಸ ಮಾಡಿರುವುದು ಎಲ್ಲರಿಗೂ ತಿಳಿದಿದೆ. ನಿಮ್ಮ ಮನಸ್ಸಿನಲ್ಲಿ ಏನಿದೆ ಎಂಬುದು ನಮಗೆ ಗೊತ್ತಿಲ್ಲ. ಆದರೆ, ಪಕ್ಷದ ಹೈಕಮಾಂಡ್ ಸೂಚನೆಯಂತೆ ನಡೆದುಕೊಳ್ಳಬೇಕಿದೆ ಎಂದು ಹೇಳಿದರು.

ಜಿಲ್ಲಾ ಮತ್ತು ತಾಲ್ಲೂಕು ಪಂಚಾಯಿತಿ ಚುನಾವಣೆಯಲ್ಲಿ ಜೆಡಿಎಸ್-ಬಿಜೆಪಿ ಮೈತ್ರಿ ಮುಂದುವರೆದರೆ ಸಾರ್ವತ್ರಿಕ ಚುನಾವಣೆಗೆ ಅನುಕೂಲವಾಗುತ್ತದೆ. ಯಾರು ಮುಖ್ಯಮಂತ್ರಿ ಆಗಬೇಕೆಂಬುದು ಮುಂದಿನ ದಿನಗಳಲ್ಲಿ ಎರಡು ಪಕ್ಷಗಳ ರಾಜ್ಯ ಮತ್ತು ರಾಷ್ಟ್ರೀಯ ಮುಖಂಡರು ನಿರ್ಧರಿಸುತ್ತಾರೆ. ನಾವು ಕುಮಾರಸ್ವಾಮಿ ಅವರು ಮುಖ್ಯಮಂತ್ರಿ ಆಗಬೇಕೆಂದು ನಮ್ಮ ಅಭಿಪ್ರಾಯ ವ್ಯಕ್ತಪಡಿಸಿದ್ದೇವೆ. ಹಾಗೇ ನೀವು ನಿಮ್ಮ ಅಭಿಪ್ರಾಯ ತಿಳಿಸಿ. ಅದನ್ನು ಬಿಟ್ಟು ಮೈತ್ರಿ ಬಗ್ಗೆ ಅಪಸ್ವರ ಎತ್ತಬೇಡಿ ಎಂದು ಸಲಹೆ ನೀಡಿದರು.

> ಮೇಲ್ಮಟ್ಟದಲ್ಲಿ ಮೈತ್ರಿ ಕುರಿತು ತೀರ್ಮಾನ ಆಗಿದೆ. ಅದಕ್ಕೆ ನಾವು ಬದ್ಧರಾಗಬೇಕು. ಅಂತಿಮವಾಗಿ ಯಾರಿಗೆ ಬಿ ಫಾರಂ ಎಂಬುದನ್ನು ಎರಡೂ ಪಕ್ಷಗಳ ಅಧ್ಯಕ್ಷರು ತೀರ್ಮಾನಿಸುತ್ತಾರೆ. ಅದನ್ನು ಪ್ರೀತಮ್ ಗೌಡ ಅರ್ಥ ಮಾಡಿಕೊಳ್ಳಬೇಕು. ನಮ್ಮ ಶಕ್ತಿಯನ್ನು ಕಾಲ ಬಂದಾಗ ತೋರಿಸುತ್ತೇವೆ.
> - ಹೆಚ್.ಕೆ.ಕುಮಾರಸ್ವಾಮಿ, ಮಾಜಿ ಸಚಿವ

ಪಕ್ಷದ ವರಿಷ್ಠರು ಹೇಗೆ ಹೇಳುತ್ತಾರೋ ನಾವು ಹಾಗೆ ಕೇಳುತ್ತೇವೆ. ಮೈತ್ರಿ ಇದೆ ಎಂಬ ಕಾರಣಕ್ಕೆ ನಾವೇನು ಸುಮ್ಮನೆ ಕುಳಿತಿಲ್ಲ. ಬೂತ್ ಮಟ್ಟದಿಂದ ಪಕ್ಷ ಸಂಘಟನೆ ಮಾಡುವ ಕೆಲಸಕ್ಕೆ ಮುಂದಾಗಿದ್ದೇವೆ. ಮೈತ್ರಿಯ ಆಶಯ, ತತ್ವಕ್ಕೆ ಅನುಗುಣವಾಗಿ ನಡೆದುಕೊಳ್ಳುತ್ತೇವೆ ಎಂದರು.

ಶಾಸಕ ಕೆ.ಎಂ.ಶಿವಲಿಂಗೇಗೌಡ ಅವರು ಸದನದಲ್ಲಿ ನಡೆದುಕೊಂಡ ರೀತಿ ತಲೆ ತಗ್ಗಿಸುವ ವಿಚಾರ. ಶಾಸಕ ಶರಣು ಸಲಗರ್ ಪತ್ನಿ ಬಗ್ಗೆ ಲಘುವಾಗಿ ಮಾತನಾಡಬಾರದಿತ್ತು. ಅರಸೀಕೆರೆಯಲ್ಲಿ ಶಿವಲಿಂಗೇಗೌಡರು ಇಲ್ಲದೇ ಇದ್ದಾಗಲೂ ಜೆಡಿಎಸ್ ಗೆದ್ದಿದೆ. ಅವರಿಗೆ ನೀತಿ, ಸಿದ್ಧಾಂತ ಇದ್ದಿದ್ದರೆ, ಕೆಹೆಚ್‌ಬಿ ನಿಗಮ ಮಂಡಳಿ ಸ್ಥಾನವನ್ನು ಬಿಳಿಚೌಡಯ್ಯ ಅವರಿಗೆ ಬಿಟ್ಟುಕೊಟ್ಟು, ತಾವು ಮಂತ್ರಿ

» ನಾಲ್ಕನೇ ಪುಟದಲ್ಲಿ

# ಮೋಕಲಿಯಲ್ಲಿ ದಲಿತರಿಂದ ದೇಗುಲ ಪ್ರವೇಶ

• ಪ್ರಜೋದಯ ವರದಿ

**ಅರಕಲಗೂಡು:** ಗ್ರಾಮದ ದೇವಾಲಯಕ್ಕೆ ದಲಿತರಿಗೆ ಪ್ರವೇಶ ಕಲ್ಪಿಸುವ ಮೂಲಕ ತಾಲ್ಲೂಕು ಆಡಳಿತ ಗ್ರಾಮದಲ್ಲಿ ಶಾಂತಿ-ಸಾಮರಸ್ಯದ ಸಂದೇಶ ಸಾರಿದೆ.

ತಾಲ್ಲೂಕಿನ ಮೋಕಲಿ ಗ್ರಾಮದಲ್ಲಿ ಇತ್ತೀಚೆಗೆ ಲೋಕಾರ್ಪಣೆಗೊಂಡ ಶ್ರೀ ಆಂಜನೇಯ ಸ್ವಾಮಿ ದೇವಾಲಯಕ್ಕೆ ದಲಿತರ ಪ್ರವೇಶ ನಿಷೇಧಿಸಲಾಗಿತ್ತು. ಈ ಸಂಬಂಧ ದಲಿತರು ಪೊಲೀಸ್ ಠಾಣೆಗೆ ದೂರು ಸಲ್ಲಿಸಿದ್ದರು. ದೇಗುಲ ಉದ್ಘಾಟನಾ ಸಮಾರಂಭದಲ್ಲಿ ಗೊಂದಲ ಸೃಷ್ಟಿಸಬಾರದೆಂದು ತಹಶೀಲ್ದಾರ್ ಕೋರಿದ್ದರ ಹಿನ್ನಲೆಯಲ್ಲಿ ಕಾರ್ಯಕ್ರಮ ಸಾಂಗವಾಗಿ ನೆರವೇರಿತ್ತು. ಈ ಹಿನ್ನಲೆಯಲ್ಲಿ ಬುಧವಾರ ಗ್ರಾಮಕ್ಕೆ ಭೇಟಿ ನೀಡಿದ ತಹಶೀಲ್ದಾರ್ ಹಾಗು ಅಧಿಕಾರಿಗಳು ಸೌಹಾರ್ದ ಸಭೆ ನಡೆಸಿದರು. ಸವರ್ಣೀಯರು ಕೂಡ ಯಾವುದೇ ಗೊಂದಲಕ್ಕೆ ಎಡೆಮಾಡಿಕೊಡದೆ ದಲಿತರು ದೇಗುಲ ಪ್ರವೇಶ ನಿರ್ಧಾರವನ್ನು ಸ್ವಾಗತಿಸಿದರು.

ದೇವಾಲಯ ಉದ್ಘಾಟನಾ ಸಮಾರಂಭಕ್ಕೆ ಅಡ್ಡಿಪಡಿಸುವುದು ಬೇಡ. ಕೆಲವು ದಿನಗಳ ನಂತರ ಸೌಹಾರ್ದ ಸಭೆ ನಡೆಸಿ ದೇವಾಲಯ ಪ್ರವೇಶವನ್ನು ಕಲ್ಪಿಸುವ ಭರವಸೆಯನ್ನು ತಹಶೀಲ್ದಾರ್ ಸೌಮ್ಯ, ಪೊಲೀಸ್ ಉಪ ನಿರೀಕ್ಷಕಿ ಕಾವ್ಯ ಅವರು ಭರವಸೆ ನೀಡಿದ ಮೇರೆಗೆ ದಲಿತ ಸಮುದಾಯದವರು ಹೋರಾಟ ಕೈಬಿಟ್ಟು ದೇವರ ಕಾರ್ಯ ನಡೆಯಲು ಅವಕಾಶ ಮಾಡಿಕೊಟ್ಟಿದ್ದರು.

ಗ್ರಾಮದಲ್ಲಿ 80ಕ್ಕೂ ಹೆಚ್ಚು ದಲಿತ ಮತ್ತು 70 ಸವರ್ಣೀಯರ ಕುಟುಂಬಗಳಿವೆ. ಗ್ರಾಮದಲ್ಲಿ ಆಂಜನೇಯ ಸ್ವಾಮಿ ದೇವಸ್ಥಾನ ಇದ್ದು, ದಲಿತರಿಗೆ ದೇವಸ್ಥಾನ ಪ್ರವೇಶ ನಿರಾಕರಣೆ ಮಾಡಲಾಗಿತ್ತು. ದೇವರ ಮೆರವಣಿಗೆ ದಲಿತ ಕೇರಿಗೆ ಬರುತ್ತಿರಲಿಲ್ಲ.



ಅದರಿಂದ ಅರಕಲಗೂಡು ಪೊಲೀಸ್ ಠಾಣೆಗೆ ದೂರು ನೀಡಲಾಗಿತ್ತು.

ಈ ಸಂಬಂಧ ಎಚ್ಚೆತ್ತ ತಾಲ್ಲೂಕು ಆಡಳಿತ ಗ್ರಾಮಕ್ಕೆ ಭೇಟಿ ನೀಡಿ ದಲಿತ ಮತ್ತು ಸವರ್ಣೀಯರ ಮುಖಂಡರು, ಗ್ರಾಮಸ್ಥರ ಸಮ್ಮುಖದಲ್ಲಿ ಸಭೆ ನಡೆಸಿ ಚರ್ಚಿಸಿದರು. ಇಲ್ಲಿ ಅಸ್ಪೃಶ್ಯತೆ ಆಚರಣೆ ಕಂಡುಬರುತ್ತಿಲ್ಲ. ಎರಡೂ ಸಮುದಾಯದವರು ಸೌಹಾರ್ದದಿಂದ ಇರುವುದು ಕಂಡುಬಂದಿದೆ. ಪ್ರಮುಖವಾಗಿ ಇತ್ತೀಚೆಗೆ ಲೋಕಾರ್ಪಣೆಗೊಂಡಿರುವ ಶ್ರೀ ಆಂಜನೇಯಸ್ವಾಮಿ ದೇವಾಲಯ ಪ್ರವೇಶ, ದರ್ಶನದು ಪ್ರಮುಖ ವಿಷಯವಾಗಿ ಅಭಿಪ್ರಾಯವ ವ್ಯಕ್ತವಾಗಿದೆ. ನಮ್ಮ ದೇಶದ ಕಾನೂನು ಮತ್ತು ದೇವರ ದರ್ಶನ ಎಲ್ಲಾ ವರ್ಗದವರಿಗೂ ಮುಕ್ತವಾಗಿದೆ. ಎಲ್ಲರೂ ಕೂಡ ಸಮಾನರು, ಯಾವುದೇ ರೀತಿಯ ಜಾತಿ ಬೇಧ, ಇತರೆ ಅನಿಷ್ಠ ಪದ್ಧತಿ ಆಚರಣೆಗೆ ಆಸ್ಪದವನ್ನು ಯಾರೂ ಕೂಡ ಕೊಡಬಾರದು, ಅನ್ಯೋನ್ಯತೆಯಿಂದ ಬಾಳುವುದನ್ನು ಮುಂದುವರಿಸಿ ಸಮಾಜಕ್ಕೆ ದೊಡ್ಡಸಂದೇಶವನ್ನು ನೀಡೋಣ, ಅದಕ್ಕೆ ಎರಡು ಸಮಾಜದವರು ಸಹಮತದಿಂದ ಸ್ವೀಕಾರ ಮಾಡಿ ನಮ್ಮ ಸಮ್ಮುಖದಲ್ಲಿ ಒಟ್ಟಿಗೆ ದೇವಾಲಯ ಪ್ರವೇಶ ಮಾಡಿ ದರ್ಶನ ಪಡೆಯೋಣ ಎಂದು ಅಧಿಕಾರಿಗಳ ಸಮ್ಮುಖದಲ್ಲಿ ಗ್ರಾಮಸ್ಥರು ಪ್ರತಿಜ್ಞೆ ಮಾಡಿದರು. ದಲಿತ ಸಮುದಾಯ ವರೊಂದಿಗೆ ದೇವಾಲಯ ಪ್ರವೇಶ ಮಾಡಿ ಸಾಮೂಹಿಕ ದರ್ಶನ ಪಡೆದರು.ಸಭೆಯಲ್ಲಿ ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಮಹಾದೇವಪ್ಪ, ಗ್ರಾಮಸ್ಥರಿದ್ದರು.

# ಮುಡಾ : ಲೋಕಾಯುಕ್ತ ತನಿಖೆ ಪುನಾರಂಭ

• ಪ್ರಜೋದಯ ವರದಿ

**ಮೈಸೂರು:** ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ (ಮುಡಾ) 50:50 ನಿವೇಶನ ಹಂಚಿಕೆ ಹಗರಣದ ತನಿಖೆ ಪುನರಾರಂಭವಾಗಿದ್ದು, ನಿವೇಶನ ಮಾರಾಟಗಾರರು ಹಾಗು ಲಾಭ ಪಡೆದವರಲ್ಲಿ ಆತಂಕ ಹೆಚ್ಚಾಗಿದೆ.

ಹಗರಣಕ್ಕೆ ಸಂಬಂಧಿಸಿದ 134 ಪ್ರಕರಣಗಳಿಗೆ ತನಿಖೆಯನ್ನು ಲೋಕಾಯುಕ್ತ ಪುನರಾರಂಭಿಸಿದ್ದು, ನಿವೇಶನ ಪಡೆದ 40ಕ್ಕೂ ಹೆಚ್ಚು ಮಂದಿಗೆ ನೋಟೀಸ್ ಜಾರಿ ಮಾಡ ಲಾಗಿದೆ. ಹಗರಣವು 1,055 ಸೈಟ್‌ಗಳನ್ನು ಅಕ್ರಮವಾಗಿ ಹಂಚಿಕೆ ಮಾಡಿದ ಆರೋಪಕ್ಕೆ ಸಂಬಂಧಿಸಿದ್ದು, ಅದರಿಂದ ರಾಜ್ಯ ಸರ್ಕಾರಕ್ಕೆ ಸಾವಿರಾರು ಕೋಟಿ ರೂಪಾಯಿ ಹಣಕಾಸು ನಷ್ಟ ಉಂಟಾಗಿದೆ ಎನ್ನಲಾಗಿದೆ.

ನಿವೇಶನ ಹಂಚಿಕೆಯಲ್ಲಿ ಕಾನೂನು ಉಲ್ಲಂಘನೆ ಮತ್ತು ಅಧಿಕಾರ ದುರುಪಯೋಗ ನಡೆದಿದೆಯೇ ಎಂಬು ದನ್ನು ಲೋಕಾಯುಕ್ತ ಪರಿಶೀಲಿಸುತ್ತಿದೆ. ಅದರಂತೆ ಮುಡಾ ಮಾಜಿ ಆಯುಕ್ತ ದಿನೇಶ್, ನಟೇಶ್ ಸೇರಿ ಹಲವು ಅಧಿಕಾರಿಗಳು, ಇತರರಿಗೆ ನೋಟೀಸ್ ಜಾರಿ ಮಾಡಿರುವ ಲೋಕಾಯುಕ್ತ ಅಧಿಕಾರಿಗಳು, ವಿಚಾರಣೆಗೆ ಹಾಜರಾಗುವಂತೆ ಸೂಚನೆ ನೀಡಿದ್ದಾರೆ.

# ಅಪ್ರಾಪ್ತೆ ಮೇಲೆ ಅತ್ಯಾಚಾರ: ಒಬ್ಬನಿಗೆ ಜೀವಾವಧಿ, ಮತ್ತಿಬ್ಬರಿಗೆ ಕಠಿಣ ಶಿಕ್ಷೆ

• ಪ್ರಜೋದಯ ವರದಿ

**ಹಾಸನ:** ಅಪ್ರಾಪ್ತೆ ಮೇಲೆ ನಿರಂತರ ಅತ್ಯಾಚಾರ ಎಸಗಿ ಗರ್ಭಿಣಿ ಮಾಡಿದ್ದ ಮೂವರು ಅಪರಾಧಿಗಳಿಗೆ ಜಿಲ್ಲಾ ನ್ಯಾಯಾಲಯ ಕಠಿಣ ಶಿಕ್ಷೆ ವಿಧಿಸಿ ತೀರ್ಪು ಪ್ರಕಟಿಸಿದೆ.

ಸಕಲೇಶಪುರ ತಾಲ್ಲೂಕಿನ ಗ್ರಾಮವೊಂದರ ರೂಪೇಶ್ ಎಂಬಾತನಿಗೆ ಪೋಕ್ಸೋ ಕಾಯ್ದೆಯಡಿ 10 ವರ್ಷ ಜೈಲು, 25 ಸಾವಿರ ರೂ. ದಂಡ ಹಾಗು ಎಸ್‌ಸಿ, ಎಸ್‌ಟಿ ಕಾಯ್ದೆಡಿ ಜೀವಾವಧಿ ಶಿಕ್ಷೆ ಪ್ರಕಟಿಸಲಾಗಿದೆ. ಪ್ರಕರಣದ 2ನೇ ಆರೋಪಿ ಮೂಡಿಗೆರೆ ತಾಲ್ಲೂಕಿನ ಹೊನ್ನಪ್ಪ ಹಾಗು ಹಾನುಬಾಳು ಹೋಬಳಿಯ ಚಂದ್ರಶೇಖರನಿಗೆ ತಲಾ 10 ವರ್ಷ ಕಾರಾಗೃಹ ಶಿಕ್ಷೆ ಹಾಗು 25 ಸಾವಿರ ರೂ. ದಂಡ ವಿಧಿಸಲಾಗಿದೆ.

2015ರಲ್ಲಿ ಸಕಲೇಶಪುರ ತಾಲ್ಲೂಕಿನ ಗ್ರಾಮವೊಂದರಲ್ಲಿ ಈ ಪ್ರಕರಣ ಬೆಳಕಿಗೆ ಬಂದಿತ್ತು. ಕಾಫಿ ತೋಟದಲ್ಲಿ ಕೆಲಸ ಮಾಡಿಕೊಂಡಿದ್ದ ಅಪ್ರಾಪ್ತೆಯ ಮೇಲೆ ಮೂವರು ಅತ್ಯಾಚಾರ ಎಸಗಿದ್ದರು. ಈ ವಿಚಾರವನ್ನು ಯಾರಿಗಾದರೂ ಹೇಳಿದರೆ ಕೊಲೆ ಮಾಡುತ್ತೇವೆಂದು ಬೆದರಿಕೆ ಹಾಕಿದ್ದರು ಎನ್ನಲಾಗಿದೆ. ಬಾಲಕಿಯ ಆರೋಗ್ಯದಲ್ಲಿ ಬದಲಾವಣೆ ಕಂಡಿದ್ದರಿಂದ ಪೋಷಕರು ಆಸ್ಪತ್ರೆಗೆ ಕರೆತಂದಾಗ








ಗರ್ಭಿಣಿಯಾಗಿರುವುದು ವೈದ್ಯಕೀಯ ಪರೀಕ್ಷೆಯಲ್ಲಿ ತಿಳಿದುಬಂದಿತ್ತು. ಈ ಸಂಬಂಧ ಪ್ರಕರಣ ದಾಖಲಿಸಿ ಕೊಂಡಿದ್ದ ಗ್ರಾಮಾಂತರ ಠಾಣೆ ಪೊಲೀಸರು ನ್ಯಾಯಾಲಯಕ್ಕೆ ದೋಷಾರೋಪಣಾ ಪಟ್ಟಿ ಸಲ್ಲಿಸಿದ್ದರು.

ಪ್ರಕರಣದ ವಿಚಾರಣೆ ನಡೆಸಿದ ಜಿಲ್ಲಾ ಪೋಕ್ಸೋ ವಿಶೇಷ ನ್ಯಾಯಾಲಯದ ನ್ಯಾಯಾಧೀಶ ಹೆಚ್.ಎಂ.ದೇವರಾಜು ಅವರು ಬುಧವಾರ ತೀರ್ಪು ಪ್ರಕಟಿಸಿದ್ದಾರೆ. ಸರ್ಕಾರದ ಪರವಾಗಿ ಶ್ರೀನಿವಾಸಗೌಡ ವಾದ ಮಂಡಿಸಿದದರು.

# ಹಿರಿಯ ಪತ್ರಕರ್ತ ಪಿ.ರಾಮಯ್ಯ ನಿಧನ

• ಪ್ರಜೋದಯ ವರದಿ



**ಬೆಂಗಳೂರು:** ಹಿರಿಯ ಪತ್ರಕರ್ತ ಹಾಗು ವಿಧಾನ ಪರಿಷತ್ ಮಾಜಿ ಸದಸ್ಯ ಪಿ. ರಾಮಯ್ಯ (93) ಅವರು ಬಹು ಅಂಗಾಂಗ ವೈಫಲ್ಯದಿಂದ ಮಂಗಳವಾರ ಬೆಂಗಳೂರಿನ ಆಸ್ಪತ್ರೆಯಲ್ಲಿ ನಿಧನರಾದರು.

ದಿ ಹಿಂದೂ ಪತ್ರಿಕೆಯಲ್ಲಿ ಐದು ದಶಕಗಳ ಕಾಲ ವಿವಿಧ ಹುದ್ದೆಗಳಲ್ಲಿ ಪತ್ರಕರ್ತರಾಗಿ ಕರ್ತವ್ಯ ನಿರ್ವಹಿಸಿದ್ದ ರಾಮಯ್ಯ ಅವರು ವಿಧಾನ ಪರಿಷತ್ತಿನ ಸದಸ್ಯರಾಗಿ ಸೇವೆ ಸಲ್ಲಿಸಿದ್ದರು. ವಿಧಾನ ಪರಿಷತ್ ಸದಸ್ಯರಾಗಿಯೂ ಪರಿಣಾಮಕಾರಿಯಾಗಿ ಕೆಲಸ ಮಾಡಿದ್ದರು. ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ, ಮಾಧ್ಯಮ ಅಕಾಡೆಮಿ ಪ್ರಶಸ್ತಿ, ಕೆಂಪೇಗೌಡ ಪ್ರಶಸ್ತಿಗೆ ಪಾತ್ರರಾಗಿದ್ದ ರಾಮಯ್ಯ ಅವರು, ಪತ್ರಿಕಾ ಅಕಾಡೆಮಿ ಹಾಗು ವಿವಿಧ ಪತ್ರಕರ್ತ ಕಲ್ಯಾಣ ಸಮಿತಿ ಸದಸ್ಯರಾಗಿದ್ದರು. ಸಣ್ಣ ಪತ್ರಿಕೆಗಳ ಸಮಸ್ಯೆಗಳ ಅಧ್ಯಯನಕ್ಕಾಗಿ ರಚಿಸಲಾಗಿದ್ದ ಸಮಿತಿಯ ಅಧ್ಯಕ್ಷರಾಗಿದ್ದ ಅವರು ಸಣ್ಣ ಪತ್ರಿಕೆಗಳ ಸಮಸ್ಯೆಗೆ ಪರಿಹಾರ ದೊರಕಿಸಿದ್ದರು. 1933 ಸೆಪ್ಟೆಂಬರ್ 12 ರಂದು ಜನಿಸಿದ ರಾಮಯ್ಯ ಅವರು ಇಬ್ಬರು ಪುತ್ರರು, ಒಬ್ಬ ಪುತ್ರಿ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ. ಬುಧವಾರ ಅಂತ್ಯಕ್ರಿಯೆ ನೆರವೇರಿತು.

ಮೃತರಿಗೆ ಕಾರ್ಯನಿರತ ಪತ್ರಕರ್ತರ ಸಂಘದ ರಾಜ್ಯಾಧ್ಯಕ್ಷ ಶಿವಾನಂದ ತಗಡೂರು, ಉಪಾಧ್ಯಕ್ಷ ಹೆಚ್.ಬಿ.ಮದನಗೌಡ, ಹಾಸನ ಜಿಲ್ಲಾ ಪತ್ರಕರ್ತರ ಸಂಘದ ಜಿಲ್ಲಾಧ್ಯಕ್ಷ ಜೆ.ಆರ್. ಕೆಂಚೇಗೌಡ ಅವರು ಸಂತಾಪ ಸೂಚಿಸಿದ್ದಾರೆ.

## ನಿರಂತರ ನೋಟೀಸ್‌ಗೆ ಬೇಸರ | ಹೇಳತೀರದ ಶಿಕ್ಷಕರ ಗೋಳು

# ಮ್ಯಾಪಿಂಗ್ ಕಾರ್ಯದೊತ್ತಡಕ್ಕೆ ಬಿಎಲ್‌ಓಗಳು ಹೈರಾಣ

• ಪ್ರಜೋದಯ ವರದಿ

**ಹಾಸನ:** ಮತದಾರರ ವಿಶೇಷ ಸಮಗ್ರ ಪರಿಷ್ಕರಣೆಗಾಗಿ (ಎಸ್‌ಐಆರ್) ಜಿಲ್ಲಾದ್ಯಂತ ಮ್ಯಾಪಿಂಗ್ ಪ್ರಕ್ರಿಯೆ ನಡೆಯುತ್ತಿದ್ದು, ಕಾರ್ಯಕ್ಕೆ ನಿಯೋಜನೆಗೊಂಡಿರುವ ಶಾಲಾ ಶಿಕ್ಷಕರು (ಬಿಎಲ್‌ಒ)ಗಳು ಹೈರಾಣಾಗಿದ್ದಾರೆ.

2002ರ ಮತದಾರರ ಪಟ್ಟಿಯನ್ನು 2025ರ ಮತದಾರರ ಪಟ್ಟಿಗೆ ಜೋಡಣೆ ಮಾಡುವುದು, 2002ರ ಮತದಾರರ ಪಟ್ಟಿಯಲ್ಲಿ ಮತದಾರರ ಹೆಸರು ನೊಂದಣಿಯಾಗದಿದ್ದಲ್ಲಿ ಅವರ ತಂದೆ/ತಾಯಿ/ಅಜ್ಜ/ಅಜ್ಜಿಯರ ಭಾಗ ಸಂಖ್ಯೆ ಹಾಗು ಕ್ರಮ ಸಂಖ್ಯೆಯೊಂದಿಗೆ ಜೋಡಣೆ ಮಾಡಿಕೊಳ್ಳಬೇಕು. 2002ರ ಮತದಾರರಾಗಿದ್ದಲ್ಲಿ ವಾಸವಿದ್ದಂತಹ ವಿಧಾನಸಭಾ ಕ್ಷೇತ್ರದ ಹೆಸರು/ಸಂಖ್ಯೆ, ಭಾಗ ಸಂಖ್ಯೆ ಹಾಗು ಕ್ರಮ ಸಂಖ್ಯೆ ಯನ್ನು ತಮ್ಮ ವ್ಯಾಪ್ತಿಯ ಬೂತ್ ಮಟ್ಟದ ಅಧಿಕಾರಿಗಳಿಗೆ ಸಾರ್ವಜನಿಕರು ನೀಡಬೇಕು. ಆದರೆ, ಈ ಕಾರ್ಯ ಸುಲಲಿತವಾಗಿ ಆಗದಿರುವು ದರಿಂದ ಶಿಕ್ಷಕರು ಅತ್ಯಧಿಕ ಹೊರೆ ಎದುರಿಸ ಬೇಕಾಗಿದೆ.



ಕಾರ್ಯದೊತ್ತಡಕ್ಕೆ ಸುಸ್ತಾದ ಶಿಕ್ಷಕರು

ಪ್ರಾಥಮಿಕ ಶಾಲಾ ಶಿಕ್ಷಕರು ಮಕ್ಕಳಿಗೆ ಪಠ್ಯ ಬೋಧನೆಗಿಂತ ಇನ್ನಿತರ ಚಟುವಟಿಕೆಯಲ್ಲೇ ಕಾಲ ಕಳೆಯುವಂತಾಗಿದೆ. ಪಾಠ ಮಾಡುವು ದನ್ನು ಬಿಟ್ಟು 54 ಹೆಚ್ಚುವರಿ ಕೆಲಸಗಳನ್ನು ಶಿಕ್ಷಕರು ಕಡ್ಡಾಯವಾಗಿ ಮಾಡಲೇಬೇಕಿದೆ. ಇದೆಲ್ಲದರ ಜೊತೆಗೆ ಬಿಎಲ್‌ಒ ಕೆಲಸವನ್ನು ನೀಡಿರುವುದರಿಂದ ಪಠ್ಯ ಬೋಧನೆಗೆ ಸಮಯ ನೀಡಲು ಸಾಧ್ಯವಾಗುತ್ತಿಲ್ಲ. ಒಂದು ಬೂತ್‌ಗೆ ಒಬ್ಬ ಶಿಕ್ಷಕರನ್ನು ನಿಯೋಜಿಸಿರುವುದರಿಂದ ಕಳೆದ ಒಂದೂವರೆ ತಿಂಗಳಿನಿಂದ ಶಿಕ್ಷಕರು ತರಗತಿಗಳತ್ತ ಮುಖ ಮಾಡಿಲ್ಲ. ಬೆಳಿಗ್ಗೆಯಿಂದ ಸಂಜೆಯವರೆಗೆ ಮ್ಯಾಪಿಂಗ್ ಕಾರ್ಯದಲ್ಲೇ ಮುಳುಗಿದ್ದಾರೆ. ಅದರಿಂದ ವಿದ್ಯಾರ್ಥಿಗಳ ಕಲಿಕೆ ಮೇಲೆ ವ್ಯತಿರಿಕ್ತ ಪರಿಣಾಮ ಬೀರುತ್ತಿದೆ ಎಂಬ ಆರೋಪ ಕೇಳಿ ಬಂದಿದೆ.

### ಮ್ಯಾಪಿಂಗ್ ಕಾರ್ಯವಿಧಾನ ಹೇಗೆ ?

ಮತದಾರರ ವಿಶೇಷ ಪರಿಷ್ಕರಣೆಯಡಿ ಒಬ್ಬ ವ್ಯಕ್ತಿಗೆ ಎರಡೆರಡು ಕಡೆ ಮತದಾರರ ಗುರುತಿನ ಚೀಟಿ ಇದ್ದರೆ ಒಂದನ್ನು ಡಿಲೀಟ್ ಮಾಡಬೇಕು. 2002ರ ಮತದಾರರ ಗುರುತಿನ ಚೀಟಿ ಅನ್ವಯ 2025ಕ್ಕೆ ಅಪ್ಡೇಟ್ ಮಾಡಬೇಕು. ಕುಟುಂಬದ ವ್ಯಕ್ತಿ ಮರಣ ಹೊಂದಿದ್ದರೆ ಅಥವಾ ಸ್ಥಳಾಂತರವಾಗಿದ್ದರೆ ಅಂತಹವರ ಮಾಹಿತಿಯನ್ನು ಆ್ಯಪ್‌ನಲ್ಲಿ ಅಪ್ಲೋಡ್ ಮಾಡಬೇಕು. ಈ ಕಾರ್ಯಕ್ಕಾಗಿ ಸಾರ್ವಜನಿಕರು ತಮ್ಮ ಬೂತ್ ಕೇಂದ್ರಕ್ಕೆ ಬರಬೇಕೆಂಬ ನಿಯಮವಿದೆ. ಆದರೆ, ಸಾರ್ವಜನಿಕರು

» ನಾಲ್ಕನೇ ಪುಟದಲ್ಲಿ

### ಹಳ್ಳಿಗಳಲ್ಲಿ ಸಲೀಸು -ನಗರಗಳಲ್ಲಿ ಕಷ್ಟ

ಗ್ರಾಮೀಣ ಭಾಗದಲ್ಲಿ ಸಾರ್ವಜನಿಕರ ವಲಸೆ ಕಡಿಮೆ ಹಾಗು ಪತ್ತೆ ಹಚ್ಚುವಿಕೆ ಸುಲಭವಾಗಿರುವುದರಿಂದ ಬಿಎಲ್ ಓಗಳಿಗೆ ಕಷ್ಟವಾಗುತ್ತಿಲ್ಲ. ಆದರೆ, ನಗರ ವ್ಯಾಪ್ತಿಯಲ್ಲಿ ಮ್ಯಾಪಿಂಗ್ ಕಷ್ಟ ಹೇಳತೀರದಾಗಿದೆ. ಉದ್ಯೋಗ, ವ್ಯಾಪಾರ ಮತ್ತಿತರ ಕಾರಣಗಳಿಂದ ಸ್ಥಳಾಂತರವಾದವರನ್ನು ಪತ್ತೆ ಮಾಡುವುದು ಸವಾಲಾಗಿದೆ. ಕೆಲವು ಬೂತ್‌ಗಳಲ್ಲಿ ಶೇ.5 ರಿಂದ 10ರಷ್ಟು ಮಾತ್ರ ಸಾಧನೆಯಾಗಿದೆ. ಅಂತಹ ಶಿಕ್ಷಕರಿಗೆ ಮೇಲಾಧಿಕಾರಿಗಳು ನಿಂದಿಸುತ್ತಿದ್ದಾರೆ. ಮಾನಸಿಕವಾಗಿ ಹಿಂಸೆ ನೀಡುತ್ತಿರುವುದು ಖಂಡನೀಯವೆಂದು ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಜಿಲ್ಲಾಧ್ಯಕ್ಷೆ ಚೈತ್ರಾ, ನಾಯಕರಹಳ್ಳಿ ಅವರು ಹೇಳಿದರು.

# ಯೋಧರಿಗೆ ಶ್ರದ್ಧಾಂಜಲಿ : ಫೆ.14ರಂದು ಬೈಕ್ ರ‍್ಯಾಲಿ

• ಪ್ರಜೋದಯ ವರದಿ

**ಹಾಸನ:** ಪುಲ್ವಾಮಾ ದಾಳಿಯಲ್ಲಿ ಹುತಾತ್ಮರಾದ 44 ಸಿಆರ್‌ಪಿಎಫ್ ಯೋಧರಿಗೆ ಶ್ರದ್ಧಾಂಜಲಿ ಸಲ್ಲಿಸಲು ಫೆ.14ರಂದು ನಗರದಲ್ಲಿ ಬೈಕ್ ರ‍್ಯಾಲಿ ಹಮ್ಮಿಕೊಳ್ಳಲಾಗಿದೆ ಎಂದು ನಿವೃತ್ತ ಅರೆಸೇನಾ ಪಡೆ ಒಕ್ಕೂಟದ ಜಿಲ್ಲಾಧ್ಯಕ್ಷ ಪಿ.ವಿ.ನಾಗೇಶ್ ಅವರು ತಿಳಿಸಿದರು.


ಬುಧವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಬೈಕ್ ರ‍್ಯಾಲಿ ಅಂದು ಬೆಳಿಗ್ಗೆ 10 ಗಂಟೆಗೆ ನಗರದ ಡೇರಿ ವೃತ್ತದಿಂದ ಹೊರಡಲಿದೆ. ರಿಂಗ್ ರಸ್ತೆ, ಸುಬೇದಾರ್ ನಾಗೇಶ್ ವೃತ್ತ, ಸಾಲಗಾಮೆ ರಸ್ತೆ, ಸಹ್ಯಾದ್ರಿ ಸರ್ಕಲ್, ಹೇಮಾವತಿ ಪ್ರತಿಮೆ, ಎನ್.ಆರ್.ವೃತ್ತ, ಬಿಎಂ ರಸ್ತೆ, ರೈಲ್ವೆ ನಿಲ್ದಾಣ ಮುಂಭಾಗ, ಡೇರಿ ವೃತ್ತದ ಮೂಲಕ ಕೆಂಚಟ್ಟಹಳ್ಳಿಯಲ್ಲಿರುವ ಅರೆಸೇನಾ ಪಡೆಯ ಭವನದ ಬಳಿ ಕೊನೆಗೊಳ್ಳಲಿದೆ ಎಂದು ತಿಳಿಸಿದರು.

ನಮ್ಮ ಪಡೆಯ 44 ಯೋಧರು ಹುತಾತ್ಮರಾಗಿ ಫೆ.14ಕ್ಕೆ 7 ವರ್ಷ ತುಂಬಲಿದೆ. ಹಾಗೆಯೇ ರಾಜ್ಯದಲ್ಲೇ ಮೊದಲ ಬಾರಿಗೆ ಅರೆಸೇನಾ ಭವನ ನಿರ್ಮಾಣಗೊಂಡು 1 ವರ್ಷ ಕಳೆದಿದೆ. ಇದರ ಸ್ಮರಣಾರ್ಥ ಮತ್ತು ನಮ್ಮ ಮುಂದಿನ ಕಾರ್ಯ

» ನಾಲ್ಕನೇ ಪುಟದಲ್ಲಿ

» ಎಪ್‌ಸ್ಟೀನ್ ಅಮೆರಿಕದ ಶ್ರೀಮಂತ ಕುಳ, ಅವನ ಸಂಪರ್ಕಗಳು ಜಗತ್ತಿನ ಪ್ರಮುಖ ನಾಯಕರೊಂದಿಗೆ ಇದ್ದವು. ಆದರೆ ಅವನ ಒಳಗಿನ ಪ್ರಪಂಚವು ಹೇಗಿತ್ತು ಎಂದು ನಾವು ಈಗ ತಿಳಿದಿದ್ದೇವೆ. ಅವನು ಅಪರಾಧಿ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡಿದ್ದ ಮತ್ತು ಅವನ ಸಂಪರ್ಕಗಳು ಅವನನ್ನು ರಕ್ಷಿಸಲು ಪ್ರಯತ್ನಿಸಿದ್ದವು.

# ನಿಯಮಗಳ ಅಡಿಯಲ್ಲಿ ಮರೆಮಾಚಲಾಗುವ ಪಾಶವೀಯತೆ



ಕಹಿಸತ್ಯ ಮಕ್ಕಳು ಸಮಾಜದ ಭವಿಷ್ಯ. ಅವರ ಸುರಕ್ಷತೆ, ಪ್ರತಿಯೊಬ್ಬ ನಾಗರಿಕನ ಕರ್ತವ್ಯ. ಆದರೆ, ಮಕ್ಕಳನ್ನು ವೇಶ್ಯಾವೃತ್ತಿಗೆ ದೂಡುವ ಕ್ರೂರಪದ್ಧತಿ ಮಾನವೀಯತೆಯ ಮೇಲಿನ ಭೀಕರ ದಾಳಿ. ಇದು ಕೇವಲ ಅಪರಾಧವಲ್ಲ, ಇದು ಕ್ಷಮಿಸಲಾಗದ ಪಾಪ. ಇದರಲ್ಲಿ ಮಕ್ಕಳಿಗೆ ಯಾವುದೇ ಆಯ್ಕೆ ಇಲ್ಲ, ಯಾವುದೇ ಒಪ್ಪಿಗೆ ಇಲ್ಲ. ಬಲವಂತ, ಬೆದರಿಕೆ, ಬಡತನ, ಮೋಸ ಮತ್ತು ಅಧಿಕಾರದ ದುರುಪಯೋಗ, ಇದರ ಮೂಲಕಾರಣಗಳು

ಮಾನವನು ಇತರ ಪ್ರಾಣಿಗಳಂತೆ ಮೂಲಭೂತ ಆಸೆ-ಅವಶ್ಯಕತೆಗಳ ಮೇಲೆ ನಡಿಗೆ ನಡೆಸುವ ಜೀವಿ. ಆಹಾರ, ಆಶ್ರಯ, ಪ್ರಜನನ, ಶತ್ರುಗಳಿಂದ ರಕ್ಷಣೆ ಇತ್ಯಾದಿ ಮೂಲಭೂತ ಪ್ರೇರಣೆಗಳೇ ಅವನ ಚಲನೆಯ ಮೂಲ. ಗುಂಪಿನಲ್ಲಿನ ಸ್ಥಾನಕ್ಕಾಗಿಯೇ, ಶಕ್ತಿ ಮತ್ತು ಪ್ರಭುತ್ವದ ಹೋರಾಟಗಳು ಸಂಭವಿಸುತ್ತವೆ.

ಲೈಂಗಿಕ ಆಸೆಯೇ, ಪ್ರಾಬಲ್ಯ, ಸ್ವಯಂ-ಪ್ರತಿಷ್ಠೆ, ಭಾವನಾತ್ಮಕ ಸುಖದ ಮೂಲವಾಗಿರುತ್ತದೆ. ಈ ಮೂಲಭೂತತೆಯನ್ನು ಮರೆಮಾಡಲು ನಾವು ಸಾಮಾಜಿಕ ನಿಯಮಗಳು, ಕಾನೂನುಗಳು, ಸಂಸ್ಕೃತಿ ಮತ್ತು ಧರ್ಮ ಎಂಬ ಪದರಗಳನ್ನು ರಚಿಸಿಕೊಂಡಿದ್ದೇವೆ. ಇವುಗಳ ಮೂಲಕ ಈ ಪ್ರಾಣಿಕ ಸ್ವಭಾವವನ್ನು ಮರೆಮಾಡಿ, ಮಾನವನು ಉತ್ತಮ ವ್ಯಕ್ತಿಯ ಮುಖವಾಡವನ್ನು ಧರಿಸಿದ್ದಾನೆ.

ಆದರೂ, ಈ ವೇಷದ ಹಿಂದೆ, ಅಧಿಕಾರ ಮತ್ತು ಸಂಪತ್ತಿನ ಪ್ರಭಾವದಲ್ಲಿ, ಮೂಲ ಪ್ರೇರಣೆಗಳು ಜೀವಂತವಾಗಿರುತ್ತವೆ. ಇದರಿಂದ ಉಂಟಾಗುವ ಫಲಿತಾಂಶವೇ, ಸದ್ಯಕ್ಕೆ ಟ್ರೆಂಡಿಂಗ್ ನಲ್ಲಿ ಇರುವ ಎಪ್‌ಸ್ಟೀನ್ ಫಲನಂಥ ಘಟನೆಗಳು. ಶಕ್ತಿ ಮತ್ತು ಲೈಂಗಿಕ ಉತ್ಸಾಹದ ನಡುವಿನ ಸಂಬಂಧಗಳು, ಧರ್ಮ, ಕಥೆ, ಪುರಾಣ ಮತ್ತು ಸಂಸ್ಕೃತಿಯಲ್ಲಿಯೂ ಪ್ರತ್ಯಕ್ಷವಾಗುತ್ತವೆ.

ಮಾನವನ ನಡವಳಿಕೆಯನ್ನು ಅರ್ಥಮಾಡಿಕೊಳ್ಳಲು, ನಾವು ಮಾನವನ ಮೂಲ ಸ್ವರೂಪವನ್ನು ಅರ್ಥಮಾಡಿಕೊಳ್ಳಬೇಕು. ಮಾನವನು ಒಂದು ಸಂಕೀರ್ಣ ಜೀವಿ, ಅವನು ತನ್ನ ಸ್ವಾಭಾವಿಕ ಆಸೆ, ಆಕಾಂಕ್ಷೆಗಳು ತ್ತು ಸಮಾಜದ ನಿಯಮಗಳ ನಡುವೆ ಹೋರಾಡುತ್ತಾನೆ. ಈ ಹೋರಾಟವು ಮಾನವನ ನಡವಳಿಕೆಯನ್ನು ರೂಪಿಸುತ್ತದೆ ಮತ್ತು ಅದರ ಪರಿಣಾಮವಾಗಿ, ಸಮಾಜದಲ್ಲಿ ಅನೇಕ ಸಮಸ್ಯೆಗಳು ಉದ್ಭವಿಸುತ್ತವೆ. ಅದರಲ್ಲಿ ಪ್ರಮುಖವಾಗಿರುವುದು, ವೇಶ್ಯಾವಾಟಿಕೆ.

ಇದು ಜಗತ್ತಿನ ಅತಿ ಪುರಾತನವಾದ ವೃತ್ತಿ. ಇದು ಸಾವಿರಾರು ವರ್ಷಗಳಿಂದ ನಡೆಯುತ್ತಿದೆ ಮತ್ತು ಇದನ್ನು ನಿವಾರಿಸಲು ಅನೇಕ ಪ್ರಯತ್ನಗಳನ್ನು ಮಾಡಲಾಗಿವೆ. ಆದರೆ ಇದು ಎಂದಿಗೂ ಕೊನೆಗೊಳ್ಳುವುದಿಲ್ಲ. ಇತ್ತೀಚೆಗೆ ಜಗತ್ತಿನಲ್ಲಿ ಅಲ್ಲೋಲಕಲ್ಲೋಲ ಸೃಷ್ಟಿಸಿದ ಜೆಫ್ರಿ ಎಪ್‌ಸ್ಟೀನ್ ಪ್ರಕರಣವು ಇದಕ್ಕೆ ಒಂದು ಉದಾಹರಣೆ.

ಎಪ್‌ಸ್ಟೀನ್ ಅಮೆರಿಕದ ಶ್ರೀಮಂತ ಕುಳ, ಅವನ ಸಂಪರ್ಕಗಳು ಜಗತ್ತಿನ ಪ್ರಮುಖ ನಾಯಕರೊಂದಿಗೆ ಇದ್ದವು. ಆದರೆ ಅವನ ಒಳಗಿನ ಪ್ರಪಂಚವು ಹೇಗಿತ್ತು ಎಂದು ನಾವು ಈಗ ತಿಳಿದಿದ್ದೇವೆ. ಅವನು ಅಪರಾಧಿ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡಿದ್ದ ಮತ್ತು ಅವನ ಸಂಪರ್ಕಗಳು ಅವನನ್ನು ರಕ್ಷಿಸಲು ಪ್ರಯತ್ನಿಸಿದ್ದವು.

ಎಪ್‌ಸ್ಟೀನ್ ಪ್ರಕರಣವು ನಮಗೆ ಒಂದು ಪಾಠ ಕಲಿಸುತ್ತದೆ.

ಪ್ರಭಾವಶಾಲಿ ಜನರು ತಮ್ಮ ಅಪರಾಧಗಳನ್ನು ಮುಚ್ಚಿಡಲು ಶ್ರಮಿಸಿದರೂ, ಒಂದಲ್ಲ ಒಂದು ದಿನ ಅದು ಹೊರಬರುತ್ತದೆ ಮತ್ತು ಮನುಷ್ಯನ ಮುಖವಾಡವನ್ನು ಬೆತ್ತಲೆಗೊಳಿಸುತ್ತದೆ. ಅಂಥದ್ದರಲ್ಲಿ, ಯಶಸ್ವಿ ವ್ಯಕ್ತಿಗಳು, ಸಮಾಜದಲ್ಲಿ ಆದರ್ಶಪ್ರಾಯರಾಗಿದ್ದವರು, ಒಮ್ಮೆಗೇ ಈ ತರಹ ಬೆತ್ತಲೆಯಾದಾಗ, ಸಹಿಸಿಕೊಳ್ಳುವುದು ಅಸಾಧ್ಯ!

ಮನುಷ್ಯ ತನ್ನ ಅನಾಚಾರಗಳನ್ನು ಕಾನೂನುಬದ್ಧವಾಗಿಸಲು, ಸಮಾಜದಲ್ಲಿ ಎಲ್ಲರೂ ಅದನ್ನು ಒಪ್ಪಿಕೊಳ್ಳುವಂತಾಗಲು ವಿವಿಧ ಮಾರ್ಗಗಳನ್ನು ಅನುಸರಿಸಿದ್ದಾನೆ. ಪುರಾಣಗಳಲ್ಲಿ, ಇಂದ್ರಲೋಕವನ್ನು ಸೃಷ್ಟಿಸಿ, ಇಂದ್ರನ ಆಸ್ಥಾನದಲ್ಲಿ ಅಪ್ಸರೆಯರಿದ್ದರು, ಅವರು ಇಂದ್ರನ ಆಸ್ಥಾನದಲ್ಲಿದ್ದ ಉಳಿದ ದೇವತೆಗಳನ್ನು ಕಾಲಕಾಲಕ್ಕೆ ನೃತ್ಯ, ಮಧುಪಾನಗಳಿಂದ ಸುಖದ ಸುಪ್ಪತ್ತಿಗೆಯಲ್ಲಿ, ಲೋಲುಪತೆಯಲ್ಲಿ ಮೀಯಿಸಿ ಎಲ್ಲರನ್ನೂ ಖುಷಿಪಡಿಸುತ್ತಿದ್ದರು ಎಂದು ಘಂಟಾಘೋಷವಾಗಿ ಹೇಳಲಾಗಿದೆ.

ಮುನಿಗಳ ತಪಸ್ಸನ್ನು ಭಂಗಪಡಿಸಲು ಕೂಡ ಇಂದ್ರನು ಈ ಅಪ್ಸರೆಯರನ್ನು ಉಪಯೋಗಿಸಿ ಕೊಂಡ ಅಂತ ಕಥೆಗಳಿವೆ. ಭಾರತ ಒಂದೇ ಅಲ್ಲ, ಪ್ರಾಚೀನ ಗ್ರೀಸ್, ರೋಮ್, ಚೀನಾ, ಮತ್ತು ಇತರ ದೇಶಗಳಲ್ಲಿ ವೇಶ್ಯಾವಾಟಿಕೆಯು ಸಾಮಾನ್ಯ ವಿದ್ಯಮಾನವಾಗಿತ್ತು. ಚಂದ್ರಗುಪ್ತ ಮೌರ್ಯನ ಕಾಲದಲ್ಲಿ ಕೂಡ ವೇಶ್ಯಾವಾಟಿಕೆಯ ಬಗ್ಗೆ ಪ್ರಸ್ತಾಪವಿದೆ. ಇದು ಮುಂದುವರಿದಂತೆ ಮುಸ್ಲಿಂ ರಾಜರ ಆಕ್ರಮಣದಲ್ಲಿ ಒಂದು ಬಗೆಯ ವಿಭಿನ್ನ ತಿರುವನ್ನು ಪಡೆದುಕೊಂಡಿತು.

ಯುದ್ಧದಲ್ಲಿ ಸೋತ ರಾಜನ ಅರಮನೆಯ ಮಹಿಳೆಯರನ್ನು, ಉನ್ನತ ಹುದ್ದೆಯಲ್ಲಿದ್ದ ಆಸ್ಥಾನಿಕರ ಮನೆಯ ಕುಲೀನ ಮಹಿಳೆಯರನ್ನು, ಸೋತ ರಾಜ್ಯದ ಸುಂದರ ಹುಡುಗಿಯರನ್ನು ಸೆರೆ ಹಿಡಿದು ತಂದು ಹರಂ ಅಂತ ಕರೆಯಲಾಗುತ್ತಿದ್ದ ದೊಡ್ಡ ದೊಡ್ಡ ಮನೆಗಳಲ್ಲಿ, ಅರಮನೆಗಳಲ್ಲಿ ಕೂಡಿ ಹಾಕುತ್ತಿದ್ದರೆಂದು ಇತಿಹಾಸದಲ್ಲಿ ದಾಖಲಾಗಿದೆ.

ಅಕ್ಬರನ ಹರಂನಲ್ಲಿ 5000ಕ್ಕಿಂತ ಜಾಸ್ತಿ ಮಹಿಳೆಯರಿದ್ದರು ಅಂತ ಇತಿಹಾಸದ ಪುಟಗಳಲ್ಲಿ ದಾಖಲಾಗಿದೆ. ಮಹಿಳೆಯರನ್ನು ಭೋಗದ ವಸ್ತು ಅಂತ ದೇವತೆಗಳೇ ಪ್ರಮಾಣಿಸಿರುವಾಗ, ಅದನ್ನು ಲೀಗಲ್ ಎನ್ನುವಾಗ, ಮನುಷ್ಯರು ಅದನ್ನು ನಂಬುವುದರಲ್ಲಿ, ಅನುಸರಿಸುವುದರಲ್ಲಿ ಅಪರಾಧವಿಲ್ಲ ಎಂದು ಗಂಡಸರೇ legitimize ಮಾಡಿದ್ದಾರೆ ಶತಮಾನಗಳ ಹಿಂದೆಯೇ! ದೇವದಾಸಿ ಪದ್ಧತಿ ಕೂಡ ವೇಶ್ಯಾವಾಟಿಕೆಯ ಇನ್ನೊಂದು ರೂಪ. ವೇಶ್ಯಾವಾಟಿಕೆಯು ವಿವಿಧ ಪ್ರಕಾರಗಳಲ್ಲಿ ಇಂದಿಗೂ ಅಸ್ತಿತ್ವದಲ್ಲಿದೆ.

ಬೀದಿಯ ವೇಶ್ಯಾವಾಟಿಕೆ, ಬಾರ್ ಮತ್ತು ಕ್ಲಬ್, ಮಸಾಜ್ ಪಾರ್ಲರ್‌ಗಳಲ್ಲಿನದು ಮಾತ್ರವಲ್ಲದೆ, ಆನ್‌ಲೈನ್ ವೇಶ್ಯಾವಾಟಿಕೆಯು ಇಂಟರ್‌ನೆಟ್ ಮತ್ತು ಸಾಮಾಜಿಕ ಮಾಧ್ಯಮಗಳ ಮೂಲಕ ನಡೆಯುತ್ತದೆ. ಶ್ರೀಮಂತರಲ್ಲಿ, ಅಧಿಕಾರ ಇರುವವರ ಜೀವನದಲ್ಲಿ ಏನೋ ಒಂದು ಕೊರತೆ ಕಾಡುತ್ತಿರುತ್ತದೆ.

## ಜನಸಾಮಾನ್ಯರು ತಮ್ಮ ಜೀವನದಲ್ಲಿ ಕುಟುಂಬವನ್ನು ನೋಡಿಕೊಳ್ಳುವುದರಲ್ಲಿ, ವ್ಯಸ್ತರಾಗಿರುತ್ತಾರೆ......

- ಈ ಅಗರ್ಭ ಶ್ರೀಮಂತರು, ಆಯಕಟ್ಟಿನ ಜಾಗದಲ್ಲಿ ಇರುವರು, ಅಧಿಕಾರದಲ್ಲಿ ಇರುವವರು, ತಮ್ಮ ವಾಂಛೆಯನ್ನು ತೀರಿಸಿಕೊಳ್ಳಲು ಬೇರೆ ಬೇರೆ ದಾರಿಯನ್ನು ಹುಡುಕುತ್ತಾರೆ.
- ಈ ಶ್ರೀಮಂತರ ಮತ್ತು ಅನುಕೂಲವಂತರ, ಪ್ರಭಾವಿ ಜನರ ಜೀವನವು ಮುಚ್ಚಿಟ್ಟರೆ ಚೆನ್ನ; ಗಟಾರ ಮುಚ್ಚಿದ್ದರೆ ಚೆಂದ, ತೆರೆದಲ್ಲಿ ಅಸಹನೀಯ ವಾಸನೆ!
- ಚರಂಡಿಗಳ ಮೇಲೆ ಚಪ್ಪಡಿ ಮುಚ್ಚಿದಾಗ, ನಮಗೆ ವಾಸನೆ ಬರುವುದಿಲ್ಲ.
- ಚರಂಡಿಗಳ ಮೇಲೆ ಎಷ್ಟೋ ಜನ ವ್ಯಾಪಾರ ಮಾಡುತ್ತಾರೆ.
- ಚರಂಡಿಗಳ ಮೇಲೆ ಬಟ್ಟೆ, ತಿನಿಸು ಮಾರಾಟ ಮಾಡುತ್ತಾರೆ.
- ಆ ದಾರಿಯ ಮೇಲೆ ಹಾದುಹೋಗುವವರಿಗೆ ಕೆಳಗಡೆ ಚರಂಡಿ ಇದೆ ಅನ್ನುವುದು ಗೊತ್ತಿರುವುದಿಲ್ಲ.
- ಅದೇ ರೀತಿ, ನಾವೂ ಈ ಪ್ರಭಾವಿ ವ್ಯಕ್ತಿಗಳ, ಆಯಕಟ್ಟಿನ ಜಾಗದಲ್ಲಿರುವ ಶ್ರೀಮಂತರ, ಕೇವಲ ಒಂದೇ ಮುಖವನ್ನು ನೋಡಿರುತ್ತೇವೆ.
- ನಮಗೆ ಅನಿಸುತ್ತದೆ, ಅವರು ಜೀವನದಲ್ಲಿ ತುಂಬಾ ಸುಖಿಯಾಗಿದ್ದಾರೆ.
- ದಿನಕ್ಕೊಂದು ಬಟ್ಟೆ, ದಿನಕ್ಕೊಂದು ಕಾರಲ್ಲಿ ಓಡಾಡಿ ತುಂಬಾ ವೈಭವೋಪೇತ ಜೀವನವನ್ನು ಸಾಗಿಸುತ್ತಿದ್ದಾರೆ ಅಂತ.
- ಬದುಕಿನ ಮತ್ತೊಂದು ಮಜಲು ತುಂಬಾ ಗಲೀಜಾಗಿರುತ್ತದೆ. ಅದನ್ನ ಮುಚ್ಚಿಟ್ಟರೆ ಒಳ್ಳೆಯದು. ತೆರೆದಾಗ, ನಮ್ಮ ಭ್ರಮೆ ಕಳಚಿಬೀಳುತ್ತದೆ.
- ಈ ಜೆಫ್ರಿ ಎಪ್‌ಸ್ಟೀನ್ ಫಲ ಓಪನ್ ಆದ ನಂತರ, ತುಂಬಾ ಜನರ ಮುಖವಾಡ ಕಳಚಿ ಬಿಚ್ಚಿದೆ.

ಜನಸಾಮಾನ್ಯರು ತಮ್ಮ ಜೀವನದಲ್ಲಿ ಕುಟುಂಬವನ್ನು ನೋಡಿಕೊಳ್ಳುವುದರಲ್ಲಿ, ದುಡ್ಡು ಹೊಂದಿಸುವುದರಲ್ಲಿ ವ್ಯಸ್ತರಾಗಿರುತ್ತಾರೆ. ಅವರಲ್ಲೂ ಕೊರತೆ ಇದ್ದರೂ, ಅದನ್ನುಪೂರೈಸಿಕೊಳ್ಳುವ ಶಕ್ತಿ ಮತ್ತು ಸಂಪನ್ಮೂಲ ಇರುವುದಿಲ್ಲ. ಅವಕಾಶ ಸಿಕ್ಕಿದರೆ, ಚಾ ಯಾರೂ ಬಿಟ್ಟು ಕೊಡಲ್ಲ!

ಆದರೆ ಈ ಅಗರ್ಭ ಶ್ರೀಮಂತರು, ಆಯಕಟ್ಟಿನ ಜಾಗದಲ್ಲಿ ಇರುವರು, ಅಧಿಕಾರದಲ್ಲಿ ಇರುವವರು, ತಮ್ಮ ವಾಂಛೆಯನ್ನು ತೀರಿಸಿಕೊಳ್ಳಲು ಬೇರೆ ಬೇರೆ ದಾರಿಯನ್ನು ಹುಡುಕುತ್ತಾರೆ. ಈ ಶ್ರೀಮಂತರ ಮತ್ತು ಅನುಕೂಲವಂತರ, ಪ್ರಭಾವಿ ಜನರ ಜೀವನವು ಮುಚ್ಚಿಟ್ಟರೆ ಚೆನ್ನ; ಗಟಾರ ಮುಚ್ಚಿದ್ದರೆ ಚೆಂದ, ತೆರೆದಲ್ಲಿ ಅಸಹನೀಯ ವಾಸನೆ! ಚರಂಡಿಗಳ ಮೇಲೆ ಚಪ್ಪಡಿ ಮುಚ್ಚಿದಾಗ, ನಮಗೆ ವಾಸನೆ ಬರುವುದಿಲ್ಲ.

ಚರಂಡಿಗಳ ಮೇಲೆ ಎಷ್ಟೋ ಜನ ವ್ಯಾಪಾರ ಮಾಡುತ್ತಾರೆ. ಚರಂಡಿಗಳ ಮೇಲೆ ಬಟ್ಟೆ, ತಿನಿಸು ಮಾರಾಟ ಮಾಡುತ್ತಾರೆ. ಆ ದಾರಿಯ ಮೇಲೆ ಹಾದುಹೋಗುವವರಿಗೆ ಕೆಳಗಡೆ ಚರಂಡಿ ಇದೆ ಅನ್ನುವುದು ಗೊತ್ತಿರುವುದಿಲ್ಲ. ಅದೇ ರೀತಿ, ನಾವೂ ಈ ಪ್ರಭಾವಿ ವ್ಯಕ್ತಿಗಳ, ಆಯಕಟ್ಟಿನ ಜಾಗದಲ್ಲಿರುವ ಶ್ರೀಮಂತರ, ಕೇವಲ ಒಂದೇ ಮುಖವನ್ನು ನೋಡಿರುತ್ತೇವೆ.

ನಮಗೆ ಅನಿಸುತ್ತದೆ, ಅವರು ಜೀವನದಲ್ಲಿ ತುಂಬಾ ಸುಖಿಯಾಗಿದ್ದಾರೆ. ದಿನಕ್ಕೊಂದು ಬಟ್ಟೆ, ದಿನಕ್ಕೊಂದು ಕಾರಲ್ಲಿ ಓಡಾಡಿ ತುಂಬಾ ವೈಭವೋಪೇತ ಜೀವನವನ್ನು ಸಾಗಿಸುತ್ತಿದ್ದಾರೆ ಅಂತ. ಆದರೆ ಅವರ ಬದುಕಿನ ಮತ್ತೊಂದು ಮಜಲು ತುಂಬಾ ಗಲೀಜಾಗಿರುತ್ತದೆ. ಅದನ್ನ ಮುಚ್ಚಿಟ್ಟರೆ ಒಳ್ಳೆಯದು. ತೆರೆದಾಗ, ನಮ್ಮ ಭ್ರಮೆ ಕಳಚಿಬೀಳುತ್ತದೆ. ಈ ಜೆಫ್ರಿ ಎಪ್‌ಸ್ಟೀನ್ ಫಲ ಓಪನ್ ಆದ ನಂತರ, ತುಂಬಾ ಜನರ ಮುಖವಾಡ ಕಳಚಿ ಬಿಚ್ಚಿದೆ.

ಈ ತರಹದ ಪಾರ್ಟಿಗಳು, ಈ ತರಹದ ವಾಂಛೆಗಳು, ಈ ತರಹದ ಪಶುಸದೃಶ ಆಸೆಗಳು ಮನುಷ್ಯನಿಗೆ ಹೊಸದಲ್ಲ.

ಆದರೆ ಈ ಫೈಲ್‌ನಲ್ಲಿ ಇರುವಂಥ ಕೆಲವೊಂದು ವಿಷಯಗಳು ನಿಜಕ್ಕೂ ಅಸಹನೀಯ. ಚಿಕ್ಕ ಹೆಣ್ಣು ಮಕ್ಕಳನ್ನು ಲೈಂಗಿಕ ತೃಷೆಗೆ ಉಪಯೋಗಿಸಿಕೊಳ್ಳುವುದು ಅತ್ಯಂತ ದುಃಖಕರ, ದುರದೃಷ್ಟಕರ. ಅದಕ್ಕೆ ಕ್ಷಮೆ ಇಲ್ಲ. ಚಿಕ್ಕ ಹುಡುಗಿಯರನ್ನು ವ್ಯಭಿಚಾರಕ್ಕೆ ಬಳಸುವುದು ಕೇವಲ ಕಾನೂನು ಉಲ್ಲಂಘನೆಯಲ್ಲ, ಪಾಪ. ಈ ಪಾಪಕ್ಕೆ ಕ್ಷಮೆಯಿಲ್ಲ, ಪ್ರಾಯಶ್ಚಿತ್ತವಿಲ್ಲ.

ಮಕ್ಕಳು ಸಮಾಜದ ಭವಿಷ್ಯ. ಅವರ ಸುರಕ್ಷತೆ, ಪ್ರತಿಯೊಬ್ಬ ನಾಗರಿಕನ ಕರ್ತವ್ಯ. ಆದರೆ, ಮಕ್ಕಳನ್ನು ವೇಶ್ಯಾವೃತ್ತಿಗೆ ದೂಡುವ ಕ್ರೂರಪದ್ಧತಿ ಮಾನವೀಯತೆಯ ಮೇಲಿನ ಭೀಕರ ದಾಳಿ. ಇದು ಕೇವಲ ಅಪರಾಧವಲ್ಲ, ಇದು ಕ್ಷಮಿಸಲಾಗದ ಪಾಪ. ಇದರಲ್ಲಿ ಮಕ್ಕಳಿಗೆ ಯಾವುದೇ ಆಯ್ಕೆ ಇಲ್ಲ, ಯಾವುದೇ ಒಪ್ಪಿಗೆ ಇಲ್ಲ.

ಬಲವಂತ, ಬೆದರಿಕೆ, ಬಡತನ, ಮೋಸ ಮತ್ತು ಅಧಿಕಾರದ ದುರುಪಯೋಗ, ಇದರ ಮೂಲ ಕಾರಣಗಳು. ಇಂಥ ಕೃತ್ಯಗಳು ಮಕ್ಕಳ ಮನಸ್ಸನ್ನು, ದೇಹ ಮತ್ತು ಭವಿಷ್ಯವನ್ನು ಶಾಶ್ವತವಾಗಿ ಗಾಯಗೊಳಿಸುತ್ತವೆ. ಈ ಅಪರಾಧದ ಪರಿಣಾಮಗಳು ಜೀವನಪೂರ್ತಿ ಮಕ್ಕಳನ್ನು ಹಿಂಬಾಲಿಸುತ್ತವೆ. ಮಕ್ಕಳಿಂದ ಕದ್ದುಕೊಳ್ಳಲ್ಪಡುವುದು ಕೇವಲ ಬಾಲ್ಯವಲ್ಲ; ಅವರ ಕನಸುಗಳು, ಆಸೆಗಳು ಮತು ಮಾನವೀಯ ಗೌರವವೂ ಕಸಿಯಲ್ಪಡುತ್ತದೆ.


ಮಕ್ಕಳ ವೇಶ್ಯಾವೃತ್ತಿಯನ್ನು ಯಾವುದೇ ಧರ್ಮ, ಸಂಸ್ಕೃತಿ ಅಥವಾ ಪರಿಸ್ಥಿತಿ ಸಮರ್ಥಿಸಿಕೊಳ್ಳಲಾರದು. ಇಂಥ ಕೃತ್ಯಗಳಲ್ಲಿ ತೊಡಗಿರುವವರು, ಅದರ ಹಿಂದೆ ನಿಂತಿರುವ ಜಾಲಗಳು, ದಲ್ಲಾಳಿಗಳು ಮತ್ತು ಲಾಭ ಪಡೆಯುವ ಎಲ್ಲರೂ ಕಠಿಣ ಶಿಕ್ಷೆಗೆ ಪಾತ್ರರಾಗಬೇಕು. ಅಪರಾಧಿಗಳಿಗೆ ಶಿಕ್ಷೆಯಲ್ಲಿ ಯಾವುದೇ ಸಡಿಲಿಕೆ ಇರಬಾರದು; ನ್ಯಾಯವು ಮಕ್ಕಳ ಪರವಾಗಿರಬೇಕು. ಸಮಾಜವಾಗಿ ನಾವು ಮೌನವಾಗಿರಬಾರದು. ಸಂಶಯಾಸ್ಪದ ಚಟುವಟಿಕೆಗಳನ್ನು ಕಂಡರೆ, ವರದಿ ಮಾಡುವುದು ನಮ್ಮ ಹೊಣೆ. ಮಕ್ಕಳ ವೇಶ್ಯಾವೃತ್ತಿ ಮಾನವೀಯತೆಗೆ ವಿರುದ್ಧವಾದ ಪಾಪ.

ಜೆಫ್ರಿ ಎಪ್‌ಸ್ಟೀನ್ ಎಂಬ ಹೆಸರು ಜಗತ್ತಿನಾದ್ಯಂತ ಸಮಾಜವನ್ನು ಬೆಚ್ಚಿಬೀಳಿಸಿದ ಒಂದು ಕತ್ತಲೆಯ ಅಧ್ಯಾಯಕ್ಕೆ ಸಂಕೇತವಾಗಿದೆ. ಅಪ್ರಾಪ್ತ ಮಕ್ಕಳ ಲೈಂಗಿಕ ಶೋಷಣೆ, ಶ್ರೀಮಂತರು ಮತ್ತು ಪ್ರಭಾವಶಾಲಿಗಳ ಭಾಗವಹಿಸುವಿಕೆ ಮತ್ತು ನ್ಯಾಯವ್ಯವಸ್ಥೆಯ ಮೇಲೆ ಉಂಟಾದ ಗಂಭೀರ ಪ್ರಶ್ನೆಗಳು, ಇವೆಲ್ಲವೂ ಎಪ್‌ಸ್ಟೀನ್ ಪ್ರಕರಣವನ್ನು ಕೇವಲ ಒಂದು ಅಪರಾಧ ಪ್ರಕರಣವಲ್ಲದೆ ಒಂದು ಸಾಮಾಜಿಕ ಎಚ್ಚರಿಕೆಯಾಗಿ ಪರಿವರ್ತಿಸಿದೆ. ಈ ದಾಖಲೆಗಳು ಮಕ್ಕಳ ಲೈಂಗಿಕ ಶೋಷಣೆಯು ಹೇಗೆ ಸದ್ದಿಲ್ಲದೆ, ಆದರೆ ವ್ಯಾಪಕವಾಗಿ ನಡೆಯುತ್ತಿದೆ ಎಂಬ ಭಯಾನಕ ಸತ್ಯವನ್ನು ಸಮಾಜದ ಮುಂದೆ ತಂದಿವೆ.


ನ್ಯಾಯ, ಪಾರದರ್ಶಕತೆ ಮತ್ತು ಮಕ್ಕಳ ಸುರಕ್ಷತೆ, ಇವು ಕೇವಲ ಮಾತುಗಳಾಗದೆ, ಕಾರ್ಯರೂಪಕ್ಕೆ ಬರಬೇಕಾದ ಸಮಯ ಇದು. ಎಪ್‌ಸ್ಟೀನ್ ಪ್ರಕರಣ ಸಮಾಜಕ್ಕೆ ಕೊಟ್ಟ ಗಾಯ ಆಳವಾದದ್ದು, ಆದರೆ ಅದರಿಂದ ನಾವು ಪಾಠ ಕಲಿತರೆ ಮಾತ್ರ ನೋವಿಗೆ ಅರ್ಥ ಸಿಗುತ್ತದೆ, ಪರಿಹಾರ ಸಿಗುತ್ತದೆ.

ಮನುಷ್ಯ ಎಲ್ಲವನ್ನು ಗಳಿಸಿಯೂ ಸುಖವಾಗಿಲ್ಲ ಅಂದರೆ, ಪ್ರಾಣಿಯ ತತ್ವಗಳು ಅವನಲ್ಲಿ ಇನ್ನೂ ಜೀವಂತವಾಗಿವೆ ಎಂದರ್ಥ. ಆದರೆ ಕೆಲವೊಮ್ಮೆ ಅನಿಸುತ್ತದೆ, ಪ್ರಾಣಿಗಳು ಕೂಡ ಈ ತರಹದ ಲೈಂಗಿಕ ತೃಷೆಯನ್ನು ಬಹುಶಃ ಇಟ್ಟುಕೊಳ್ಳುವುದಿಲ್ಲ.

**- ಲೀನಾ ಜೋಶಿ,** (ಲೇಖಕಿ ಬಹುರಾಷ್ಟ್ರೀಯ ಕಂಪನಿಯೊಂದರಲ್ಲಿ ಉದ್ಯೋಗಿ)




# ಕಳಂಕದಿಂದ ಕಿರೀಟಕ್ಕೆ: ಬದಲಾದ ಕಾಲದ ತೀರ್ಪು



ಇತಿಹಾಸದಲ್ಲಿ ಇಂದು ನಾವು ಯಾರನ್ನು ಮಹಾನ್ ನಾಯಕರೆಂದು ಗೌರವಿಸುತ್ತೇವೆಯೋ, ಅವರು ಒಂದು ಕಾಲದಲ್ಲಿ ಕಾನೂನಿನ ದೃಷ್ಟಿಯಲ್ಲಿ ಶಿಕ್ಷಾರ್ಹ ಅಪರಾಧಿಗಳಾಗಿದ್ದರು. ದಕ್ಷಿಣ ಆಫ್ರಿಕಾದ ನೆಲ್ಸನ್ ಮಂಡೇಲಾ ಅವರನ್ನು ಅಂದಿನ ಸರಕಾರ ಭಯೋತ್ಪಾದಕ ಎಂದು ಕರೆದು 27 ವರ್ಷಗಳ ಕಾಲ ಸೆರೆಮನೆಯಲ್ಲಿಟ್ಟಿತ್ತು. ಕಾಲಚಕ್ರ ಉರುಳಿದಂತೆ ಅದೇ ಮಂಡೇಲಾ ದೇಶದ ಅಧ್ಯಕ್ಷರಾದರು ಮತ್ತು ನೊಬೆಲ್ ಶಾಂತಿ ಪ್ರಶಸ್ತಿ ಹಾಗೂ ಭಾರತ ರತ್ನದಂಥ ಅತ್ಯುನ್ನತ ಗೌರವಗಳಿಗೆ ಪಾತ್ರರಾದರು.

ಕಾಲಚಕ್ರ ಜಾಗತಿಕ ರಾಜಕೀಯ ಮತ್ತು ಇತಿಹಾಸದ ಪುಟಗಳನ್ನು ತಿರುವಿ ನೋಡಿದಾಗ, ಪ್ರಶಸ್ತಿಗಳು ಹಾಗೂ ಅಪರಾಧದ ಹಣೆಪಟ್ಟಿಗಳ ನಡುವಿನ ಸಂಬಂಧವು ಅತ್ಯಂತ ಸಂಕೀರ್ಣವಾಗಿ ಕಂಡುಬರುತ್ತದೆ. ಇರಾನ್‌ನ ಟೆಹರಾನ್‌ನಲ್ಲಿನ ಎವಿನ್ ಜೈಲಿನಲ್ಲಿರುವ ನರ್ಗಿಸ್ ಮೊಹಮ್ಮದಿ ಅವರಿಗೆ 2023ರಲ್ಲಿ ನೊಬೆಲ್ ಶಾಂತಿ ಪ್ರಶಸ್ತಿ ಘೋಷಣೆಯಾದಾಗ ವಿಶ್ವವೇ ಸಂಭ್ರಮಿಸಿತು. ಆದರೆ, ಇರಾನ್ ಸರಕಾರ ಅವರನ್ನು ರಾಷ್ಟ್ರೀಯ ಭದ್ರತೆಗೆ ಧಕ್ಕೆ ತಂದ ಅಪರಾಧಿ ಎಂದು ಕರೆದು, ಫೆಬ್ರವರಿ 2026ರಲ್ಲಿ ಮತ್ತೆ ಏಳೂವರೆ ವರ್ಷಗಳ ಹೆಚ್ಚುವರಿ ಶಿಕ್ಷೆಯನ್ನು ವಿಧಿಸಿದೆ.

ಸರಕಾರಗಳ ದೃಷ್ಟಿಯಲ್ಲಿ ಯಾರು ಅಪರಾಧಿ ಎನ್ನುವುದು ಕಾಲಕ್ಕೆ ತಕ್ಕಂತೆ ಮತ್ತು ಅಧಿಕಾರದಲ್ಲಿರುವವರ ಸಿದ್ಧಾಂತಕ್ಕೆ ಅನುಗುಣವಾಗಿ ಹೇಗೆ ಬದಲಾಗುತ್ತದೆ ಎಂಬುದಕ್ಕೆ ಈ ಘಟನೆಯು ಜೀವಂತ ಸಾಕ್ಷಿಯಾಗಿದೆ.

ಇತಿಹಾಸದಲ್ಲಿ ಇಂದು ನಾವು ಯಾರನ್ನು ಮಹಾನ್ ನಾಯಕರೆಂದು ಗೌರವಿಸುತ್ತೇವೆಯೋ, ಅವರು ಒಂದು ಕಾಲದಲ್ಲಿ ಕಾನೂನಿನ ದೃಷ್ಟಿಯಲ್ಲಿ ಶಿಕ್ಷಾರ್ಹ ಅಪರಾಧಿಗಳಾಗಿದ್ದರು. ದಕ್ಷಿಣ ಆಫ್ರಿಕಾದ ನೆಲ್ಸನ್ ಮಂಡೇಲಾ ಅವರನ್ನು ಅಂದಿನ ಸರಕಾರ ಭಯೋತ್ಪಾದಕ ಎಂದು ಕರೆದು 27 ವರ್ಷಗಳ ಕಾಲ ಸೆರೆಮನೆಯಲ್ಲಿಟ್ಟಿತ್ತು. ಕಾಲಚಕ್ರ ಉರುಳಿದಂತೆ ಅದೇ ಮಂಡೇಲಾ ದೇಶದ ಅಧ್ಯಕ್ಷರಾದರು ಮತ್ತು ನೊಬೆಲ್ ಶಾಂತಿ ಪ್ರಶಸ್ತಿ ಹಾಗೂ ಭಾರತ ರತ್ನದಂಥ ಅತ್ಯುನ್ನತ ಗೌರವಗಳಿಗೆ ಪಾತ್ರರಾದರು. ಮ್ಯಾನ್ಮಾರ್‌ನ ಅಂಗ್ ಸಾನ್ ಸೂ ಕಿ ಕೂಡ ಪ್ರಜಾಪ್ರಭುತ್ವಕ್ಕಾಗಿ ದಶಕಗಳ ಕಾಲ ಗೃಹಬಂಧನದಲ್ಲಿದ್ದು ನೊಬೆಲ್ ಪ್ರಶಸ್ತಿ ಪಡೆದರು.

ಇನ್ನು ಪ್ಯಾಲೆಸ್ತೀನ್ ವಿಮೋಚನಾ ಸಂಸ್ಥೆಯ ನಾಯಕ ಯಾಸರ್ ಅರಾ-ತ್ ಅವರ ಮೇಲೆ ಅನೇಕ ದೇಶಗಳು ಭಯೋತ್ಪಾದಕ ಹಣೆಪಟ್ಟಿ ಹಚ್ಚಿದ್ದರೂ, 1994ರಲ್ಲಿ ಅವರಿಗೆ ನೊಬೆಲ್ ಶಾಂತಿ ಪ್ರಶಸ್ತಿ ನೀಡಲಾಯಿತು. ಇದು ಅಂತಾರಾಷ್ಟ್ರೀಯ ರಾಜತಾಂತ್ರಿಕತೆಯಲ್ಲಿ ಪ್ರಶಸ್ತಿಗಳು ಹೇಗೆ ಧ್ರುವೀಕರಣಕ್ಕೆ ಕಾರಣವಾಗುತ್ತವೆ ಎಂಬುದನ್ನು ತೋರಿಸುತ್ತವೆ.

ಭಾರತದ ಸಂದರ್ಭದಲ್ಲೂ ಇಂಥ ಹತ್ತಾರು ಉದಾಹರಣೆಗಳಿವೆ. ಬ್ಯಾಂಡಿಟ್ ಕ್ವೀನ್ ಫೂಲನ್ ದೇವಿ ಅವರ ಮೇಲೆ ದರೋಡೆ ಮತ್ತು ಕೊಲೆಯಂಥ ಅನೇಕ ಗಂಭೀರ ಪ್ರಕರಣಗಳಿದ್ದವು. ಆದರೆ, ಜೈಲುಶಿಕ್ಷೆಯ ನಂತರ ಅವರು ಸಂಸತ್ ಸದಸ್ಯರಾಗಿ ಆಯ್ಕೆಯಾಗಿ ದೀನದಲಿತರ ಧ್ವನಿಯಾದರು.

ಅವರ ಜೀವನಗಾಥೆಯ ಚಿತ್ರವು ರಾಷ್ಟ್ರೀಯ ಚಲನಚಿತ್ರ ಪ್ರಶಸ್ತಿಗಳನ್ನು ಪಡೆಯಿತು. ಅಂತೆಯೇ, ಕ್ರಾಂತಿಕಾರಿ ವಿನಾಯಕ ದಾಮೋದರ್ ಸಾವರ್ಕರ್ ಅವರನ್ನು ಬ್ರಿಟಿಷ್ ಸರಕಾರವು ಕಠಿಣ ಕಾಲಾ ಪಾನಿ ಶಿಕ್ಷೆಗೆ ಗುರಿಪಡಿಸಿತ್ತು. ಬ್ರಿಟಿಷರ ದೃಷ್ಟಿಯಲ್ಲಿ ಅವರು ಅಪಾಯಕಾರಿ ಅಪರಾಧಿಯಾಗಿದ್ದರೂ, ಸ್ವತಂತ್ರ ಭಾರತವು ಅವರನ್ನು ಗೌರವಿಸಿತು.

ವಿವಿಧ ಕ್ಷೇತ್ರಗಳಲ್ಲೂ ಈ ವಿರೋಧಾಭಾಸ ಎದ್ದುಕಾಣುತ್ತದೆ. ಚಲನಚಿತ್ರ ನಟ ಸಂಜಯ್ ದತ್ 1993ರ ಮುಂಬೈ ಸ್ಫೋಟದ ಪ್ರಕರಣದಲ್ಲಿ ಜೈಲು ಶಿಕ್ಷೆ ಅನುಭವಿಸಿದರೂ, ಅವರ ನಟನೆಗಾಗಿ ಅನೇಕ ರಾಷ್ಟ್ರೀಯ ಮತ್ತು ಫಿಲ್ಮ್ ಫೇರ್ ಪ್ರಶಸ್ತಿಗಳು ಸಂದಿವೆ. ವಿಜ್ಞಾನ ಕ್ಷೇತ್ರದಲ್ಲಿ, ಇಸ್ರೋ ವಿಜ್ಞಾನಿ ಎಸ್.ನಂಬಿ ನಾರಾಯಣನ್ ಅವರ ಮೇಲೆ 1994ರಲ್ಲಿ ಸುಳ್ಳು ದೇಶದ್ರೋಹದ ಆರೋಪ ಹೊರಿಸಲಾಗಿತ್ತು.

ದಶಕಗಳ ನಂತರ ಸುಪ್ರೀಂ ಕೋರ್ಟ್ ಅವರನ್ನು ನಿರ್ದೋಷಿ ಎಂದು ಘೋಷಿಸಿದಾಗ, ಸರಕಾರವು ಅವರಿಗೆ ಪದ್ಮಭೂಷಣ ನೀಡಿ ಗೌರವಿಸಿತು. ಇದು ವ್ಯವಸ್ಥೆಯ ತಪ್ಪು ನಿರ್ಧಾರವನ್ನು ಪ್ರಶಸ್ತಿಯ ಮೂಲಕ ಸರಿಪಡಿಸಿದ ಸಂದರ್ಭವಾಗಿದೆ.

ಪ್ರಧಾನಿ ನರೇಂದ್ರ ಮೋದಿ ಅವರ ರಾಜಕೀಯ ಜೀವನವು ಕಳಂಕ ಮತ್ತು ಗೌರವದ ನಡುವಿನ ಸಂಘರ್ಷಕ್ಕೆ ಒಂದು ಅತಿ ದೊಡ್ಡ ಉದಾಹರಣೆಯಾಗಿದೆ. 2002ರ ಗುಜರಾತ್ ಗಲಭೆಯ ನಂತರ, ಅಂದಿನ ಮುಖ್ಯಮಂತ್ರಿಯಾಗಿದ್ದ ಮೋದಿ ಅವರ ಮೇಲೆ ಗಂಭೀರ ಆರೋಪಗಳು ಕೇಳಿ ಬಂದವು.

ವಿರೋಧ ಪಕ್ಷಗಳು ಮತ್ತು ಮಾನವ ಹಕ್ಕುಗಳ ಸಂಘಟನೆಗಳು ಅವರನ್ನು ಅಪರಾಧಿಯ ಸ್ಥಾನದಲ್ಲಿ ನಿಲ್ಲಿಸಿದವು, ಅಷ್ಟೇ ಅಲ್ಲದೆ ಅಮೆರಿಕದಂಥ ದೇಶಗಳು ಅವರಿಗೆ ವೀಸಾ ನಿರಾಕರಿಸಿ ಅಂತಾರಾಷ್ಟ್ರೀಯ ಮಟ್ಟದಲ್ಲಿ ನಿರ್ಬಂಧ ಹೇರಿದ್ದವು. ಆದರೆ, ದಶಕಗಳ ಕಾಲ ನಡೆದ ಕಾನೂನು ಹೋರಾಟದ ನಂತರ ಭಾರತದ ಸರ್ವೋಚ್ಚ ನ್ಯಾಯಾಲಯವು ಅವರಿಗೆ ಕ್ಲೀನ್ ಚಿಟ್ ನೀಡಿತು.

ಆ ಕಳಂಕದ ಕರಾಳಛಾಯೆಯಿಂದ ಹೊರಬಂದ ಮೋದಿ, ಸತತ ಮೂರು ಬಾರಿ ಭಾರತದ ಪ್ರಧಾನಿಯಾಗಿ ಆಯ್ಕೆಯಾಗುವ ಮೂಲಕ ಅಭೂತಪೂರ್ವ ಜನಪ್ರಿಯತೆ ಗಳಿಸಿದರು. ಇಂದು ಜಗತ್ತಿನ ಪ್ರಬಲ ರಾಷ್ಟ್ರಗಳಾದ ಅಮೆರಿಕ, ಯುಎಇ ಮತ್ತು-ಸೇರಿದಂತೆ ಹಲವು ದೇಶಗಳು ಅವರಿಗೆ ತಮ್ಮ ದೇಶದ ಅತ್ಯುನ್ನತ ನಾಗರಿಕ ಪ್ರಶಸ್ತಿಗಳನ್ನು ನೀಡಿ ಗೌರವಿಸಿವೆ. ಈ ಸ್ಥಿತ್ಯಂತರವು ರಾಜಕೀಯ ಸನ್ನಿವೇಶ ಮತ್ತು ಕಾಲ ಬದಲಾದಂತೆ ಒಬ್ಬ ವ್ಯಕ್ತಿಯ ಮೇಲಿನ ಕಳಂಕವು ಹೇಗೆ ಗೌರವವಾಗಿ ರೂಪಾಂತರಗೊಳ್ಳಬಹುದು ಎಂಬುದನ್ನು ಸಾರುತ್ತದೆ.

ಕ್ರಿಕೆಟಿಗ ಮೊಹಮ್ಮದ್ ಅಜರುದ್ದೀನ್ ಮ್ಯಾಚ್ ಫಿಕ್ಸಿಂಗ್ ಹಗರಣದಲ್ಲಿ ಸಿಲುಕಿ ಆಜೀವ ನಿಷೇಧಕ್ಕೊಳಗಾದರು. ಆದರೆ ಅದಕ್ಕೂ ಮುನ್ನ ಅವರು ಪದ್ಮಶ್ರೀ ಮತ್ತು ಅರ್ಜುನ ಪ್ರಶಸ್ತಿಗಳನ್ನು ಪಡೆದಿದ್ದರು. ಇತ್ತೀಚಿನ ವರ್ಷಗಳಲ್ಲಿ ಶಿಕ್ಷಣ ಮತ್ತು ಪರಿಸರ ಹೋರಾಟಗಾರ ಸೋನಂ ವಾಂಗ್ ಚುಕ್ ಅವರಿಗೆ ರಾಮನ್ ಮ್ಯಾಗ್ಸೆಸೆ ಪ್ರಶಸ್ತಿ ಲಭಿಸಿದೆ. ಆದರೆ ಲಡಾಖ್ ಹಕ್ಕುಗಳಿಗಾಗಿ ಅವರು ನಡೆಸುತ್ತಿರುವ ಹೋರಾಟದ ಕಾರಣದಿಂದಾಗಿ ಅವರು ಸರಕಾರದ ಕಣ್ಣಿಗೆ ಕಾನೂನು-ಸುವ್ಯವಸ್ಥೆಗೆ ಧಕ್ಕೆ ತರುವವರು ಎನಿಸಿ ಗೃಹಬಂಧನಕ್ಕೆ ಒಳಗಾಗುತ್ತಿದ್ದಾರೆ.

ಮೇಲಿನ ಉದಾಹರಣೆಗಳನ್ನು ಗಮನಿಸಿದಾಗ ಒಂದು ಸತ್ಯ ಸ್ಪಷ್ಟವಾಗುತ್ತದೆ: ಇಂದಿನ ಕ್ರಾಂತಿಕಾರಿ ಅಥವಾ ಹೋರಾಟಗಾರ ನಾಳೆಯ ನಾಯಕನಾಗಬಹುದು ಅಥವಾ ಇಂದಿನ ರಾಷ್ಟ್ರಪ್ರೇಮಿ ನಾಳೆಯ ಅಪರಾಧಿಯಾಗಬಹುದು.

ಕಾನೂನು ಮತ್ತು ಸಿದ್ಧಾಂತ: ಕಾನೂನು ಎನ್ನುವುದು ಕೇವಲ ಕಾಗದದ ಮೇಲಿರುವ ನಿಯಮವಲ್ಲ; ಅದು ಆಯಾ ಕಾಲದ ರಾಜಕೀಯ ಸಿದ್ಧಾಂತ ಮತ್ತು ಅಧಿಕಾರಶಾಹಿಯ ಪ್ರತಿಬಿಂಬವಾಗಿರುತ್ತದೆ. ಒಂದು ದೇಶದ ಆಡಳಿತಾರೂಢ ವ್ಯವಸ್ಥೆಯು ತನ್ನ ಅಸ್ತಿತ್ವಕ್ಕೆ ಸಂಚಕಾರ ತರುವ ಯಾವುದೇ ಧ್ವನಿಯ ಮೇಲೆ ಕಾನೂನುಬಾಹಿರ ಎಂದು ಮುದ್ರೆ ಒತ್ತುತ್ತದೆ. ಇತಿಹಾಸದುದ್ದಕ್ಕೂ ವ್ಯವಸ್ಥೆಯನ್ನು ಪ್ರಶ್ನಿಸುವವರು ಅಥವಾ ಸಮಾಜದಲ್ಲಿ ಹೊಸ ಬದಲಾವಣೆಯನ್ನು ತರಲು ಬಯಸುವ ಕ್ರಾಂತಿಕಾರಿಗಳು ಅಂದಿನ ವ್ಯವಸ್ಥೆಯ ದೃಷ್ಟಿಯಲ್ಲಿ ಅಪರಾಧಿಗಳಾಗಿಯೇ ಕಾಣಿಸಿಕೊಂಡಿದ್ದಾರೆ. ಉದಾಹರಣೆಗೆ, ಬ್ರಿಟಿಷರ ಕಾಲದ ದೇಶದ್ರೋಹದ ಕಾನೂನು ಅಂದು ಸ್ವಾತಂತ್ರ್ಯ ಹೋರಾಟಗಾರರನ್ನು ಹತ್ತಿಕ್ಕಲು ಬಳಕೆಯಾಗಿತ್ತು. ಅಂದರೆ, ಕಾನೂನು ಸ್ಥಿರವಲ್ಲ; ಅದು ಆಳುವವರ ಹಿತಾಸಕ್ತಿಗೆ ಅನುಗುಣವಾಗಿ ಬದಲಾಗುತ್ತಿರುತ್ತದೆ. ನರ್ಗಿಸ್ ಮೊಹಮ್ಮದಿ ಅವರ ವಿಷಯದಲ್ಲೂ ಇರಾನ್ ಸರಕಾರದ ಭದ್ರತಾ ಕಾನೂನುಗಳು ಅವರ ಮಾನವ ಹಕ್ಕುಗಳ ಹೋರಾಟವನ್ನು ಅಪರಾಧ ಎಂದು ವ್ಯಾಖ್ಯಾನಿಸುತ್ತಿವೆ.

ಪ್ರಶಸ್ತಿಗಳು ಮತ್ತು ವ್ಯಕ್ತಿಯ ನೈಜ ಕೊಡುಗೆ: ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ಪ್ರಶಸ್ತಿಗಳು, ವಿಶೇಷವಾಗಿ ನೊಬೆಲ್‌ನಂಥ ಗೌರವಗಳು, ವ್ಯಕ್ತಿಯ ಮೇಲೆ ಹೊರಿಸಲಾದ ತಾತ್ಕಾಲಿಕ ಕಾನೂನು ಪ್ರಕರಣಗಳಿಗಿಂತ ಹೆಚ್ಚಾಗಿ ಅವರ ಉದ್ದೇಶ ಮತ್ತು ದೀರ್ಘಕಾಲದ ಕೊಡುಗೆಯನ್ನು ಮಾನ್ಯ ಮಾಡುತ್ತವೆ. ಪ್ರಶಸ್ತಿ ನೀಡುವ ಸಂಸ್ಥೆಗಳು ವ್ಯಕ್ತಿಯನ್ನು ಕೇವಲ ಒಬ್ಬ ನಾಗರಿಕನಾಗಿ ನೋಡದೆ, ಒಂದು ದೊಡ್ಡ ಬದಲಾವಣೆಯ ಸಂಕೇತವಾಗಿ ನೋಡುತ್ತವೆ.

ನೆಲ್ಸನ್ ಮಂಡೇಲಾ ಅಥವಾ ನರ್ಗಿಸ್ ಮೊಹಮ್ಮದಿ ಅವರ ಹೋರಾಟವು ಕೇವಲ ವೈಯಕ್ತಿಕ ಲಾಭಕ್ಕಾಗಿರಲಿಲ್ಲ, ಬದಲಿಗೆ ಸಮಾನತೆ ಮತ್ತು ನ್ಯಾಯದಂಥ ಸಾರ್ವತ್ರಿಕ ಮೌಲ್ಯಗಳಿಗಾಗಿ ಇತ್ತು. ಜಾಗತಿಕ ವೇದಿಕೆಯು ಇಂಥ ವ್ಯಕ್ತಿಗಳನ್ನು ಗೌರವಿಸುವ ಮೂಲಕ, ಆಯಾ ದೇಶದ ಸರಕಾರಗಳು ಲಗತ್ತಿಸಿದ ಅಪರಾಧಿ ಎಂಬ ಹಣೆಪಟ್ಟಿಯನ್ನು ಪರೋಕ್ಷವಾಗಿ ತಿರಸ್ಕರಿಸುತ್ತದೆ ಮತ್ತು ಅವರ ಹೋರಾಟಕ್ಕೆ ನೈತಿಕ ಬೆಂಬಲವನ್ನು ನೀಡುತ್ತದೆ.

ಸತ್ಯದ ಹಾದಿಯಲ್ಲಿನ ಸಂಘರ್ಷ: ನೈತಿಕತೆ ಮತ್ತು ಕಾನೂನು ಯಾವಾಗಲೂ ಒಂದೇ ಹಾದಿಯಲ್ಲಿ ಸಾಗುವುದಿಲ್ಲ. ಕಾನೂನುಬದ್ಧವಾಗಿರುವುದು ಯಾವಾಗಲೂ ನೈತಿಕವಾಗಿ ಸರಿಯಾಗಿರಬೇಕೆಂದಿಲ್ಲ (ಉದಾಹರಣೆಗೆ: ವರ್ಣಭೇದ ನೀತಿ ಒಂದು ಕಾಲದಲ್ಲಿ ಕಾನೂನುಬದ್ಧವಾಗಿತ್ತು, ಆದರೆ ಅದು ನೈತಿಕವಾಗಿ ತಪ್ಪಾಗಿತ್ತು). ನೈತಿಕ ವಾಗಿ ಸರಿಯಾದ ಹಾದಿಯಲ್ಲಿ ನಡೆಯುವವರು ಹಲವು ಬಾರಿ ಸಂಕುಚಿತ ಮತ್ತು ದಬ್ಬಾಳಿಕೆಯ ಕಾನೂನುಗಳ ಅಡಿಯಲ್ಲಿ ಅಪರಾಧಿಗಳಾಗುತ್ತಾರೆ. ಆದರೆ ಜಾಗತಿಕ ಸಮುದಾಯವು ಇಂಥವರನ್ನು ಸಮಾಜದ ನೈಜ ರಾಯಭಾರಿಗಳು ಎಂದು ಗುರುತಿಸುತ್ತದೆ.

ನಂಬಿ ನಾರಾಯಣನ್ ಅವರ ಪ್ರಕರಣದಲ್ಲಿ ದಶಕಗಳ ಕಾಲ ಕಾನೂನು ಅವರನ್ನು ತಪ್ಪಿತಸ್ಥನೆಂದು ಬಿಂಬಿಸಿದರೂ, ಅವರ ನೈತಿಕತೆ ಮತ್ತು ವಿಜ್ಞಾನದ ಮೇಲಿನ ನಿಷ್ಠೆ ಅವರನ್ನು ಕೊನೆಗೆ ಪದ್ಮ ಪ್ರಶಸ್ತಿಗೆ ಅರ್ಹರನ್ನಾಗಿ ಮಾಡಿತು. ಇದು ಕಾನೂನು ಸೋತರೂ ನೈತಿಕತೆ ಗೆಲ್ಲುತ್ತದೆ ಎಂಬುದಕ್ಕೆ ಉತ್ತಮ ನಿದರ್ಶನ.


ಒಟ್ಟಾರೆಯಾಗಿ, ಅಭಿವ್ಯಕ್ತಿ ಸ್ವಾತಂತ್ರ್ಯ ಮತ್ತು ರಾಜಕೀಯ ಪಿತೂರಿಗಳ ನಡುವಿನ ಈ ಸಂಘರ್ಷವು ಸಮಾಜದಲ್ಲಿ ನ್ಯಾಯದ ವ್ಯಾಖ್ಯಾನವನ್ನು ನಿರಂತರವಾಗಿ ಮರುರೂಪಿಸುತ್ತಲೇ ಇರುತ್ತದೆ. ನರ್ಗಿಸ್ ಮೊಹಮ್ಮದಿ ಅವರಂಥವರ ಜೀವನವು ಜೈಲುಗೋಡೆಗಳ ನಡುವೆಯೂ ಸತ್ಯ ಮತ್ತು ನ್ಯಾಯದ ಧ್ವನಿ ಸಾಯುವುದಿಲ್ಲ ಎಂಬುದಕ್ಕೆ ಪ್ರಬಲ ಸಂಕೇತವಾಗಿದೆ.



**- ಎಸ್.ಎನ್.ಭಟ್,** ಸೈಪಂಗಲ್ಲು

- ಶಿರಸಿಯೇ ಇರಲಿ, ತಾಷ್ಕೆಂಟೇ ಇರಲಿ ಮನುಷ್ಯ ತಾನೇ ಸೃಷ್ಟಿಸಿಕೊಂಡ ಬಲೆಯಲ್ಲಿ ಬಿದ್ದು ಗೊಂದಲವನ್ನುಂಟುಮಾಡಿಕೊಳ್ಳುತ್ತಾನೆ. ಪನ್ ಮತ್ತು ವಿಟ್‌ಗಳನ್ನು ಇನ್ನೊಬ್ಬರನ್ನು ಹೀಗೆಯೆಳೆಯಲು ಅವರು ಬಳಸಿಕೊಳ್ಳುವುದಿಲ್ಲ; ಅದಕ್ಕೆ ಕಾರಣವನ್ನು ಪತ್ರಕರ್ತನ ವಿನೋದಾವಳಿಯ ಹಾವಳಿಯಲ್ಲಿ ವಿವರಿಸಿದ್ದಾರೆ.

# ನಗುವಿನೊಳಗಿನ ಬದುಕು



ಸಮಗ್ರವಾಗಿ ಹೇಳಬೇಕೆಂದರೆ ಹಾಸಿಗೆಯ ಹಾಸ್ಯ ವಿಲಾಸ ಸಂಕಲನವು, ಲಲಿತಪ್ರಬಂಧ ಪರಂಪರೆಯಲ್ಲಿ ಒಂದು ಸಮಕಾಲೀನ, ಸಂವೇದನಾಶೀಲ ಲೇಖನಗಳ ಗುಚ್ಛವಾಗಿದೆ.

ಲಲಿತ ಪ್ರಬಂಧಗಳ ಸಂಕಲನ ಹಾಸಿಗೆಯ ಹಾಸ್ಯ ವಿಲಾಸ ಇದು, ಲೇಖಕರ ವ್ಯಕ್ತಿತ್ವದಂತೆಯೇ, ಲವಲವಿಕೆಯಿಂದ ಕೂಡಿದೆ. ಈ ಕೃತಿಯಲ್ಲಿ ಒಟ್ಟೂ 23 ಪ್ರಬಂಧ ಸಂಕಲನಗಳಿವೆ. ತಲೆಬರಹ ನೋಡಿದ ಕೂಡಲೇ ಇದೊಂದು ಅಶ್ಲೀಲ ಸಾಹಿತ್ಯವಿರಬಹುದೆನೋ ಎನ್ನುವಂತೆ ಇದ್ದರೂ ಇದು ಹಾಸಿಗೆಯ ಪುರಾಣವಲ್ಲ; ಬದುಕಿನ ಜಂಜಡದಲ್ಲಿ ಬಳಲಿ ಹಾಸಿಗೆಯ ಮೇಲೆ ಉರುಳಿದಾಗ ಕೈಗೆತ್ತಿ ಕೊಂಡು ಓದಿ ಮನಸ್ಸನ್ನು ಪ್ರಫುಲ್ಲಗೊಳಿಸಿ, ಕನಸಿನ ಲೋಕಕ್ಕೊಯ್ಯುವ ಲಲಿತ ಪ್ರಬಂಧ ಸಂಕಲ್ಪ.

ಪತ್ರಿಕಾಕರ್ತರೂ ಆಗಿರುವ ಲೇಖಕರಿಗೆ ಸಮಾಜದ ಓರೆಕೋರೆಗಳನ್ನೂ, ಬವಣೆಗಳನ್ನೂ ಹತ್ತಿರದಿಂದ ನೋಡುವ ಅವಕಾಶ ದೊರಕಿತ್ತು. ವಿಧಾನ ಸೌಧದ ಮೂಲೆ ಮೂಲೆಯೂ ಪರಿಚಿತ, ಜೊತೆಗೆ ಜಗತ್ತನ್ನು ಸುತ್ತುವ ಅವಕಾಶಗಳು ಇವೆಲ್ಲವೂ ಅವರ ಬದುಕಿನ ಹಾದಿಯಲ್ಲಿ ಸಂಗ್ರಹಿಸಿದ ಅನುಭವಗಳು.

ಶಿರಸಿಯೇ ಇರಲಿ, ತಾಷ್ಕೆಂಟೇ ಇರಲಿ ಮನುಷ್ಯ ತಾನೇ ಸೃಷ್ಟಿಸಿಕೊಂಡ ಬಲೆಯಲ್ಲಿ ಬಿದ್ದು ಗೊಂದಲವನ್ನುಂಟುಮಾಡಿಕೊಳ್ಳುತ್ತಾನೆ. ಪನ್ ಮತ್ತು ವಿಟ್‌ಗಳನ್ನು ಇನ್ನೊಬ್ಬರನ್ನು ಹೀಗೆಯೆಳೆಯಲು ಅವರು ಬಳಸಿಕೊಳ್ಳುವುದಿಲ್ಲ; ಅದಕ್ಕೆ ಕಾರಣವನ್ನು ಪತ್ರಕರ್ತನ ವಿನೋದಾವಳಿಯ ಹಾವಳಿಯಲ್ಲಿ ವಿವರಿಸಿದ್ದಾರೆ.

ಇವರ ವಿನೋದವೆನ್ನುವುದು ಪ್ರತಿಷ್ಠಿತ ಕ್ಲಬ್‌ಗಳ ಮೀಟಿಂಗಿನಲ್ಲಿ ಬರುವ ಲಾಸ್ಟ್ ಲಾಫ್‌ಗಳಲ್ಲ. ಅಂತಹ ಪ್ರಸಂಗಗಳಲ್ಲಿ ಅಡಕಳ್ಳಿಯವರು ಸಂಯಮದ ಗಡಿಯೊಳಗೇ ಓದುಗರಿಗೆ ದಾಟಿಸುತ್ತಾರೆ. ಇದೇ ಲೇಖನದ ಮೂತ್ರಾದೇಶ ಎನ್ನುವಲ್ಲಿ ಗಮನಿಸಬಹುದು.

ಸರಳವಾದ ವಿಷಯಗಳನ್ನು ಗಂಭೀರ ಸಮಸ್ಯೆಯೇನೋ ಎನ್ನುವಂತೆ ವರ್ತಿಸುವ ಅನೇಕ ಸಂಗತಿಗಳನ್ನು ಇವರು ಸಹಜವಾಗಿ ವಿನೋದದೆಡೆಗೆ ತಿರುಗಿಸಿಬಿಡುತ್ತಾರೆ. ಲಲಿತಪ್ರಬಂಧದ ಪರಂಪರೆಯನ್ನು ಗಮನಿಸಿದರೆ, ಹಾಸ್ಯ ಎಂದರೆ ಸಾಮಾನ್ಯವಾಗಿ ವ್ಯಂಗ್ಯ ಅಥವಾ ಉಪದೇಶದ ಧಾಟಿಯಲ್ಲಿ ನಿಲ್ಲುವ ಪ್ರವೃತ್ತಿ ಕಾಣುತ್ತದೆ. ಆದರೆ ಈ ಕೃತಿಯಲ್ಲಿ ಅಡಕಳ್ಳಿ ಆ ಪರಂಪರೆಯನ್ನು ಒಡೆದು, ಪನ್‌ಗಳ ಮೂಲಕ ನವಿರಾದ ನಗಿಸುವುದು ಸಹಜಧರ್ಮ ಎನ್ನುವಂತೆ ಬರೆಯುತ್ತಾರೆ. ಮೊಸರನ್ನದ ಕುರಿತು ಅನೇಕರು ಬರೆದಿದ್ದಾರೆ.

ಆದರೆ ಇವರ ಮೊಸರನ್ನ ಬದುಕಿನ ಸುಪ್ರಸನ್ನದಲ್ಲಿ ಭಾರತದ ಮೊಸರೇ ಪಾಶ್ಚಾತ್ಯ ರಾಷ್ಟ್ರಗಳಲ್ಲಿ ಯೋಗರ್ಟ್ ಆಗಿರಬೇಕೆನ್ನುವುದನ್ನು ಹೇಳುತ್ತಲೇ ಜಪಾನಿನಲ್ಲಿ ತಿರುಮಲೇಶ ಭಟ್ಟರು ಮೊಸರನ್ನ ಭಟ್ಟರಾದ ವಿಷಯವನ್ನು ವಿವರಿಸುವಾಗ, ಹಾಸ್ಯವಾಗದೇ ಭಾರತದಲ್ಲಿ ಕೆಲವೊಂದು ಜನಾಂಗದವರು ಊಟದ ಕೊನೆಗೆ ಮೊಸರು ಅನಿವಾರ್ಹವೆನ್ನುವ ರಿವಾಜಿಗೆ ಬಂಧಿತರಾಗಿರುವ ನೆನಪು ಬರುತ್ತದೆ.

ಕುಂದಾಪುರದಲ್ಲಿನ ಹೋಟೇಲಿನಲ್ಲಿ ಮೊಸರಿಗೆ ಸಕ್ಕರೆ ಕೊಡಲಾಗುವುದಿಲ್ಲವೆನ್ನುವುದಕ್ಕೆ ನೀಡುವ ಕಾರಣ ಬೇಸಿಗೆಯಲ್ಲಿ ಕಾಫಿಗೆ ಗಿರಾಕಿ ಇರುವುದಿಲ್ಲ ಎನ್ನುವ ವಾಸ್ತವ ಚಿತ್ರಣ ಮ್ಯಾನೇಜ್ಮೆಂಟ್ ವಿದ್ಯಾರ್ಥಿಗಳಿಗೆ ಮಾರುಕಟ್ಟೆಯ ಹೊಸ ತಂತ್ರವನ್ನು ವಿವರಿಸುವ ಪಾಠ ಅಗಬಹುದು.

ಅವರ ಬರಹದಲ್ಲಿ ನಗು ಒತ್ತಾಯಪೂರ್ವಕವಾಗಿಲ್ಲ; ಅದು ಪರಿಸ್ಥಿತಿಯಿಂದ ಸಹಜವಾಗಿ ಹುಟ್ಟುತ್ತದೆ. ಓದುಗ ನಗುವಾಗಲೇ, ನಗುತ್ತಿರುವ ವಿಷಯವೇ ತನ್ನ ಬದುಕಿನ ಭಾಗವೆಂಬ ಅರಿವು ಮೂಡುತ್ತದೆ. ಮೊಬೈಲ್ ಮಹಿಮೆ ಮತ್ತು ಎಮ್ಮೆ ನಮ್ಮಯ ಹೆಮ್ಮೆ ಮೊದಲಾದ ಲೇಖನಗಳಲ್ಲಿ ಕಾಣಬಹುದು.

ಹಾಸಿಗೆಯ ಹಾಸ್ಯವಿಲಾಪದಲ್ಲಿ ಸಮಾಜದ ಓರೆಕೋರೆಗಳನ್ನು ಎತ್ತಿತೋರುವಾಗ ಅವುಗಳನ್ನು ಬದುಕಿನ ಸಹಜ ಭಾವ ಎನ್ನುವಂತೆ ಚಿತ್ರಿಸುತ್ತಾರೆ. ಇದು ನಮ್ಮದೇ ಅನುಭವ ಆಗಿರಬಹುದು ಎನ್ನುವಷ್ಟು ಸಹಜವಾಗಿ ಪದಗಳ ಹರಿವಿದೆ. ಗುಂಡು ಪಾರ್ಟಿಗಳಲ್ಲಿ ಕಠಿಣವಾದ ಇಂಗ್ಲೀಷ ಸಹ ಓತಪ್ರೋತವಾಗಿ ಬರುತ್ತದೆ ಎನ್ನುವ ಮಾತುಗಳು, ಪ್ರವಾಸ ವಿಪರ್ಯಾಸ ಇವೆಲ್ಲ ನಗೆಬುಗ್ಗೆಯನ್ನು ಚಿಮ್ಮಿಸುವ ಬರಹಗಳು.

ರೈಲಿನಲ್ಲಿ ಹೋಗುವಾಗ ಸಹಜವಾದ ಇಸ್ಪೀಟಿನಾಟವನ್ನು ವಿಮಾನಿನಲ್ಲಿಯೂ ಆಡಲು ಹೋಗಿ ಗಗನಸಖಿಯಿಂದ ಬೈಸಿಕೊಂಡ ಘಟನೆ, ವಿದೇಶಗಳಲ್ಲಿ ಬಚ್ಚಲಿನಲ್ಲಿ ನಮ್ಮಲ್ಲಿಯ ಹಾಗೇ ಬಕೆಟ್, ಚಂಬು ಇರಿಸುವುದಿಲ್ಲ ಅದರ ಕುರಿತು ಬರೆದ ಘಟನೆ ಭಿನ್ನ ಸಂಸ್ಕೃತಿಯಲ್ಲಿ ಸ್ವಚ್ಛತೆಯ ಪರಿಕಲ್ಪನೆ ಹೇಗೆ ಬದಲಾಗುತ್ತದೆ ಎನ್ನುವುದನ್ನು ಸೂಚಿಸುತ್ತದೆ.

ಇಂತಹುದೇ ಸಂದರ್ಭ ಮೊದಲ ಬಾರಿಗೆ ದುಬಾಯಿಯಲ್ಲಿ ನನಗೆ ಎದುರಾದಾಗ ಚೊಂಬು ಇಲ್ಲದಿದ್ದರೂ ರೂಮಿನಲ್ಲಿಟ್ಟಿದ್ದ ಗ್ಲಾಸು ನೆರವಾದ ವಿಷಯ ನೆನಪಿಗೆ ಬಂದು ನಗುತಡೆದು ಕೊಳ್ಳಲಾಗಲಿಲ್ಲ. ಇದು ಓದಿದ ನಂತರ ಮುಚ್ಚಿ ಇಡುವ ಪುಸ್ತಕವಲ್ಲ; ಓದುಗನ ದಿನನಿತ್ಯದ ಅನುಭವಗಳ ಜೊತೆ ಮೌನವಾಗಿ ಮೆಲಕುಹಾಕುವ ಬರಹಗಳ ಸಂಕಲನ. ಹಾಗಂತ ಮನರಂಜನೆಯ ಲಲಿತ ಪ್ರಬಂಧಗಳ ಗುಚ್ಛವಲ್ಲ; ಅದು ಇಂದಿನ ಬದುಕಿನ ಅಸಂಗತತೆಗಳನ್ನು ತೋರಿಸುವ ಸಂವೇದನೆಯೂ ಆಗಿದೆ.

**- ನಾರಾಯಣ** ಯಾಜಿ

